# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಅಕ್ಟೋಬರ್ 23, 2021

ಸಂಪುಟ : 48 ಸಂಚಿಕೆ : 162 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com




## ಕ್ರೀಡಾಕ್ಷೇತ್ರ ಬಲ ಪಡಿಸಲು ಹೆಚ್ಚಿನ ಒತ್ತು

### ನಗರದಲ್ಲಿನ ರಾಜ್ಯ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಿಗೆ ಚಾಲನೆ ನೀಡಿದ ಕ್ರೀಡೆ, ಯುವಜನ ಮತ್ತು ರೇಷ್ಮೆ ಸಚಿವ ಕೆ.ಸಿ. ನಾರಾಯಣ ಗೌಡ

ದಾವಣಗೆರೆ, ಸೆ. 22- ಮೂರು ದಿನಗಳ ಕಾಲ ನಡೆಯಲಿರುವ ರಾಜ್ಯ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಿಗೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಅದ್ಧೂರಿಯಾಗಿ ಚಾಲನೆ ನೀಡಲಾಯಿತು.

ಕ್ರೀಡೆ, ಯುವಜನ ಮತ್ತು ರೇಷ್ಮೆ ಸಚಿವ ಕೆ.ಸಿ. ನಾರಾಯಣ ಗೌಡ ಸಮಾರಂಭ ಉದ್ಘಾಟಿಸಿ, ಕ್ರೀಡಾ ಧ್ವಜಾರೋಹಣ ನೆರವೇರಿಸಿ ಮಾತನಾಡುತ್ತಾ, ರಾಜ್ಯದಲ್ಲಿ ಕ್ರೀಡೆಗೆ ಹೆಚ್ಚಿನ ಒತ್ತು ನೀಡಲು ಸರ್ಕಾರ ಹಲವಾರು ಕ್ರಮ ಗಳನ್ನು ಕೈಗೊಂಡಿರುವುದಾಗಿ ಹೇಳಿದರು.

ಮುಂದಿನ ಒಲಿಂಪಿಕ್ಸ್ ಪಂದ್ಯಾವಳಿಗೆ ರಾಜ್ಯದಿಂದ 75 ಕ್ರೀಡಾಪಟುಗಳನ್ನು ಕಳುಹಿಸುವ ಬಗ್ಗೆ ತೀರ್ಮಾನಿಸಲಾಗಿದೆ. ಕ್ರೀಡಾಪಟುಗಳನ್ನು ದತ್ತು ಪಡೆಯಲು 30-40 ಕಂಪನಿಗಳು ಮುಂದೆ ಬಂದಿವೆ. ಜಿಂದಾಲ್ ಕಂಪನಿಯೊಂದೇ 50 ಮಕ್ಕಳನ್ನು ದತ್ತು ಪಡೆದಿದೆ ಎಂದು ಹೇಳಿದರು.

ಸ್ಥಗಿತಗೊಂಡಿದ್ದ ಜಕ್ಕೂರು ವಿಮಾನ ನಿಲ್ದಾಣವನ್ನು ಅಭಿವೃದ್ಧಿ ಪಡಿಸಿ, ಶಿಥಿಲಾವಸ್ಥೆಯಲ್ಲಿದ್ದ 7 ವಿಮಾನಗಳನ್ನು ದುರಸ್ತಿಗೊಳಿಸಿ 15 ದಿನಗಳಲ್ಲಿ ಪುನರ್ ಆರಂಭಿಸಲಾಗುವುದು. ಸುಮಾರು 100 ಮಕ್ಕಳಿಗೆ ಪೈಲಟ್ ತರಬೇತಿ ನೀಡಿ ಅಂತರರಾಷ್ಟ್ರೀಯ ಮಟ್ಟಕ್ಕೆ ಕಳುಹಿಸಿ ಕೊಡಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

**ಬೇಡಿಕೆ ಈಡೇರಿಕೆಗೆ ಪ್ರಯತ್ನ**

**ರಾಜ್ಯ ಸರ್ಕಾರಿ ನೌಕರರಿಗೆ ಹೊಸ ವೇತನ ಆಯೋಗ, ನೂತನ ಪಿಂಚಣಿ ಯೋಜನೆ ರದ್ದು, ವೇತನ ತಾರತಮ್ಯ ನಿವಾರಣೆ ಕುರಿತ ಬೇಡಿಕೆಗಳ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ, ಸಾಧ್ಯವಾದಷ್ಟೂ ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಸಚಿವದ್ವಯರುಗಳಾದ ಕೆ.ಸಿ. ನಾರಾಯಣಗೌಡ ಹಾಗೂ ಬಿ.ಎ. ಬಸವರಾಜ ಭರವಸೆ ನೀಡಿದರು.**

ವಿದ್ಯೆಗೆ ಕೊಡುವ ಗೌರವವನ್ನು ಕ್ರೀಡೆಗೂ ಕೊಡುವ ಅಗತ್ಯವಿದೆ. ದೇಹ ಹಾಗೂ ಮನಸ್ಸಿಗೆ ಬಲ ನೀಡುವ ಕ್ರೀಡಾ ಕ್ಷೇತ್ರದ ಸಚಿವನಾಗಲು ಸಂತೋಷದಿಂದಲೇ ಒಪ್ಪಿಕೊಂಡಿದ್ದಾಗಿ ಹೇಳಿದ ಅವರು, ರಾಜ್ಯದ 31 ಜಿಲ್ಲೆಗಳಲ್ಲೂ ಮಹಿಳೆ ಹಾಗೂ ಪುರುಷ ಕ್ರೀಡಾಪಟುಗಳಿಗೆ ಪ್ರತ್ಯೇಕ ವಸತಿ ಸೌಲಭ್ಯ ಕಲ್ಪಿಸಲಾಗುವುದು. ಎಲ್ಲಾ ಜಿಲ್ಲೆಗಳಲ್ಲೂ ಕ್ರೀಡಾ ಪ್ರೋತ್ಸಾಹಕ್ಕೆ ಬೇಕಾದ ಅಗತ್ಯತೆಗಳನ್ನು ತಿಳಿದುಕೊಳ್ಳಲು ತಜ್ಞರ ತಂಡ ನೇಮಕ ಮಾಡಲಾಗಿದ್ದು, ವರದಿಗನುಗುಣವಾಗಿ ಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ ಮಾತನಾಡುತ್ತಾ, ಬೆಳಿಗ್ಗೆಯಿಂದ ಸಂಜೆ ವರೆಗೆ ಕರ್ತವ್ಯ ನಿರ್ವಹಣೆಯ ಒತ್ತಡದಲ್ಲಿರುವ ನೌಕರರಿಗೆ ಇಂತಹ ಕಾರ್ಯಕ್ರಮ ಅತ್ಯಾವಶ್ಯಕ ಎಂದು ಹೇಳಿದರು.

ಇಷ್ಟೊಂದು ಸಂಖ್ಯೆಯ ಸರ್ಕಾರಿ ನೌಕರರನ್ನು ಒಂದೇ ಸ್ಥಳದಲ್ಲಿ ನೋಡುತ್ತಿರುವುದು ಇದೇ ಮೊದಲ ಬಾರಿಯಾಗಿದ್ದು, ರಾಜ್ಯ ಸರ್ಕಾರಿ **(2ನೇ ಪುಟಕ್ಕೆ)**

## ರೂಪಾಂತರಿ ಬಾರದ ಹೊರತು ಕೊರೊನಾ ಭೀಕರವಾಗದು

**ಸ್ಥಳೀಯವಾಗಿ ಸೋಂಕು ಹೆಚ್ಚಾಗುವ ಕಡೆ ನಿಗಾ ವಹಿಸಲು ಪರಿಣಿತರ ಸಲಹೆ**

ನವದೆಹಲಿ, ಅ. 22 – ಕೊರೊನಾದ ರೋಗ ನಿರೋಧಕತೆಯನ್ನು ಮೀರುವ ಸಾಮರ್ಥ್ಯದ ಹೊಸ ರೂಪಾಂತರಿ ಕಂಡು ಬರದ ಹೊರತು ಎರಡನೇ ಅಲೆಯಂತಹ ಭೀಕರ ಅಲೆ ಬರುವ ಸಾಧ್ಯತೆ ಇಲ್ಲ. ಆದರೆ, ಕೊರೊನಾ ಅಂತ್ಯ ಕಾಣುತ್ತಿದೆ ಎಂದು ಈಗಲೇ ಹೇಳುವುದು ಅವಸರವಾಗುತ್ತದೆ ಎಂದು ಹಲವಾರು ಪರಿಣಿತರು ಹೇಳಿದ್ದಾರೆ.

ದೈನಂದಿನ ಕೊರೊನಾ ಪ್ರಕರಣಗಳ ಸಂಖ್ಯೆ ಇಳಿಕೆಯಾಗುತ್ತಿರುವುದು ಸಮಗ್ರ ಚಿತ್ರಣದ ಒಂದು ಭಾಗ ಮಾತ್ರ. ಕೊರೊನಾದಿಂದ ಸಾವಿನ ದರ ಹಾಗೂ ಲಸಿಕೆಯ ಪ್ರಮಾಣದ ಬಗ್ಗೆಯೂ ಪರಿಗಣಿಸಬೇಕಿದೆ. ಬ್ರಿಟನ್‌ನಂತಹ ದೇಶಗಳಲ್ಲಿ ಕೊರೊನಾ ಮತ್ತೆ ಹೆಚ್ಚಾಗುತ್ತಿರುವ ಬಗ್ಗೆಯೂ ಯೋಚಿಸಬೇಕಿದೆ ಎಂದು ಪರಿಣಿತರು ಹೇಳಿದ್ದಾರೆ.

ಈ ಬಗ್ಗೆ ಮಾತನಾಡಿರುವ ವೈರಾಣು ಪರಿಣಿತ ಶಹೀದ್ ಜಮೀಲ್, ನಿನ್ನೆಯಷ್ಟೇ 100 ಕೋಟಿ ಡೋಸ್ ಲಸಿಕೆ ನೀಡಲಾಗಿದೆ. ಲಸಿಕೆ ಪೂರೈಕೆ ಹೆಚ್ಚಾಗಿದ್ದರೂ, ಇನ್ನಷ್ಟು ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ ಎಂದಿದ್ದಾರೆ.

ನಾವು ಕೊರೊನಾ ನಿವಾರಣೆಯತ್ತ ಸಾಗುತ್ತಿದ್ದೇವೆ. ಆದರೆ, ಕೊರೊನಾ ನಿವಾರಣೆಯಾಗುವ ಹಂತಕ್ಕೆ ಬಂದಿಲ್ಲ ಎಂದು ಹರಿಯಾಣದ ಅಶೋಕ ವಿಶ್ವವಿದ್ಯಾನಿಲಯದ ಜಮೀಲ್ ಹೇಳಿದ್ದಾರೆ.

ಪ್ರತಿದಿನ ಕಂಡು ಬರುವ ಕೊರೊನಾ ಪ್ರಕರಣಗಳ ಸಂಖ್ಯೆ ಮೂರು ತಿಂಗಳ ಹಿಂದೆ 40 ಸಾವಿರ ಇದ್ದದ್ದು, ಈಗ 15 ಸಾವಿರಕ್ಕೆ ಇಳಿಕೆಯಾಗಿದೆ. ಕೇಂದ್ರ ಆರೋಗ್ಯ ಸಚಿವಾಲಯದ ದಾಖಲೆಗಳ ಪ್ರಕಾರ ಕಳೆದ 28 ದಿನಗಳಿಂದ ದೈನಂದಿನ ಕೊರೊನಾ **(2ನೇ ಪುಟಕ್ಕೆ)**

## ಮಲ್ಲಶೆಟ್ಟಿಹಳ್ಳಿ : ಹೆದ್ದಾರಿ ಬಳಿ ಸೇತುವೆಗೆ ಆಗ್ರಹ

### ಹೆದ್ದಾರಿ ತಡೆಗೆ ಮುಂದಾದ ರೈತರು, ಗ್ರಾಮಸ್ಥರ ಮನವೊಲಿಸಿದ ಡಿಸಿ, ಎಸ್ಪಿ

ದಾವಣಗೆರೆ, ಅ.22- ಇಲ್ಲಿಗೆ ಸಮೀಪದ ಮಲ್ಲಶೆಟ್ಟಿಹಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿಗೆ ಅಡ್ಡಲಾಗಿ ಅಂಡರ್ ಪಾಸ್, ಸರ್ವೀಸ್ ರಸ್ತೆ ನಿರ್ಮಿಸುವಂತೆ ಒತ್ತಾಯಿಸಿ, ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ನೇತೃತ್ವದಲ್ಲಿ ಮಲ್ಲಶೆಟ್ಟಿಹಳ್ಳಿ ಬಳಿ ಸುತ್ತಮುತ್ತಲಿನ ಗ್ರಾಮಸ್ಥರು ಇಂದು ಪ್ರತಿಭಟಿಸಿದರು.



ಹೆದ್ದಾರಿ ತಡೆಗೂ ಪ್ರಯತ್ನಿಸಿದಾಗ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಪ್ರತಿಭಟನಾಕಾರರ ಮನವೊಲಿಸಿದರು.

ಮಲ್ಲಶೆಟ್ಟಿಹಳ್ಳಿ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ರೈತ ಸಂಘದ ರಾಜ್ಯ ಮುಖಂಡ ರೆಡ್ಡಿಹಳ್ಳಿ ವೀರಣ್ಣ, ಜಿಲ್ಲಾಧ್ಯಕ್ಷ ಮಲ್ಲಶೆಟ್ಟಿಹಳ್ಳಿ ಚನ್ನಬಸಪ್ಪ, ಪ್ರಧಾನ ಕಾರ್ಯದರ್ಶಿ ಚಿನ್ನಸಮುದ್ರ ಶೇಖರ ನಾಯ್ಕ **(2ನೇ ಪುಟಕ್ಕೆ)**

## ಅಕ್ರಮ ದಾಸ್ತಾನು : ಪಡಿತರ ಅಕ್ಕಿ, ರಾಗಿ ವಶ

ದಾವಣಗೆರೆ, ಅ.22- ಮನೆಯೊಂದರಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ್ದ 679 ಕೆಜಿ ಪಡಿತರ ಅಕ್ಕಿ ಮತ್ತು 809 ಕೆಜಿ ರಾಗಿಯನ್ನು ಡಿಸಿಆರ್‌ಬಿ ಪೊಲೀಸ್ ತಂಡ ವಶಪಡಿಸಿಕೊಂಡಿದೆ.

ಸ್ಥಳೀಯ ಆಜಾದ್ ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಆಜಾದ್ ನಗರ 10ನೇ ಕ್ರಾಸ್ ನಲ್ಲಿರುವ ಮನೆಯೊಂದರಲ್ಲಿ ಅಕ್ರಮವಾಗಿ ಪಡಿತರ ಅಕ್ಕಿ ಮತ್ತು ರಾಗಿಯನ್ನು ದಾಸ್ತಾನು ಮಾಡಿದ್ದರ ಖಚಿತ ಮಾಹಿತಿ ಮೇರೆಗೆ ಡಿಸಿಆರ್‌ಬಿ ಘಟಕದ ಪೊಲೀಸ್ ಉಪಾಧೀಕ್ಷ ಬಿ.ಎಸ್. ಬಸವರಾಜ್ ನೇತೃತ್ವದ ಪೊಲೀಸ್ ತಂಡ ದಾಳಿ ಮಾಡಿದೆ.

ಪಡಿತರ ಅಕ್ಕಿ, ರಾಗಿ ಸಹಿತ ಒಂದು ಆಟೋ ವಶಪಡಿಸಿಕೊಂಡಿದ್ದು, ಇಬ್ಬರನ್ನು ಬಂಧಿಸಲಾಗಿದೆ.

## ಪರಿಸ್ಥಿತಿ ಅವಲೋಕಿಸಿ ಎಲ್‌ಕೆಜಿ ಆರಂಭಕ್ಕೆ ಚಿಂತನೆ

ಬೆಂಗಳೂರು, ಅ. 22 - ಒಂದರಿಂದ ಐದನೇ ತರಗತಿ ಒಳಗಿನ ಶಾಲೆ ಆರಂಭದ ನಂತರದ ಪರಿಸ್ಥಿತಿ ಅವಲೋಕಿಸಿ ಎಲ್‌ಕೆಜಿ ಮತ್ತು ಯುಕೆಜಿ ಪ್ರಾರಂಭಿಸುವುದಾಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 6 ರಿಂದ 12 ನೇ ತರಗತಿಗಳು ಆರಂಭದ ನಂತರ ಶಾಲಾ ಮಕ್ಕಳಲ್ಲಿ ಕೊರೊನಾ ಸೋಂಕಿನ ಭೀತಿ ಕಾಣಿಸಿಕೊಂಡಿಲ್ಲ, ಅಷ್ಟೇ ಅಲ್ಲ, ಗ್ರಾಮೀಣ ಭಾಗದಲ್ಲಿಯೂ ಶೇ. 90 ರಷ್ಟು ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗುತ್ತಿದ್ದಾರೆ ಎಂದು ಹೇಳಿದ್ದಾರೆ. **(2ನೇ ಪುಟಕ್ಕೆ)**

**ಗ್ರಾಮೀಣ ಭಾಗದಲ್ಲಿ ಮಕ್ಕಳ ಹಾಜರಾತಿ ಉತ್ತಮವಾಗಿದೆ, ನಗರ ಪ್ರದೇಶದಲ್ಲಿ ಕೆಲವೆಡೆ ಮಕ್ಕಳನ್ನು ಶಾಲೆಗೆ ಕಳುಹಿಸಲು ಪೋಷಕರೇ ಹಿಂಜರಿಯುತ್ತಿದ್ದಾರೆ.**

**- ಸಚಿವ ಬಿ.ಸಿ. ನಾಗೇಶ್**

## ಇಂದು ಚಿಕ್ಕಜಾಜೂರು-ಚಿತ್ರದುರ್ಗ ರೈಲ್ವೆ ಮಾರ್ಗದ ಪರಿಶೀಲನೆ

ದಾವಣಗೆರೆ, ಅ. 22 – ನಾಳೆ ಶನಿವಾರದಂದು ಚಿಕ್ಕಜಾಜೂರು - ಚಿತ್ರದುರ್ಗ ರೈಲ್ವೆ ನಿಲ್ದಾಣಗಳ ನಡುವೆ ವಿದ್ಯುದೀಕರಣ ಕಾಮಗಾರಿಯ ಪರಿಶೀಲನೆ ನಡೆಯಲಿದೆ ಎಂದು ರೈಲ್ವೆ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ವಿಶೇಷ ರೈಲು ಪ್ರತಿ ಗಂಟೆಗೆ 100 ಕಿ.ಮೀ. ವೇಗದಲ್ಲಿ ಚಲಿಸುವ ಮೂಲಕ ಪರೀಕ್ಷೆ ನಡೆಯಲಿದೆ. **(2ನೇ ಪುಟಕ್ಕೆ)**

## ಚೀನಾದಲ್ಲಿ ಮತ್ತೆ ಕಂಡ ಕೊರೊನಾ

ಬೀಜಿಂಗ್, ಅ. 22 – ಚೀನಾದಲ್ಲಿ ಶುಕ್ರವಾರ 32 ಕೊರೊನಾ ಪ್ರಕರಣಗಳು ಕಂಡು ಬಂದಿದ್ದು, ಎರಡು ತಿಂಗಳ ನಂತರ ಶೂನ್ಯ ಕೊರೊನಾ ದಾಖಲೆಗೆ ತೆರೆ ಬಿದ್ದಿದೆ.

ಚೀನಾ ಶೂನ್ಯ ಕೊರೊನಾ ನೀತಿಯನ್ನು ಪಾಲಿಸುತ್ತಿದೆ. ಒಂದು ಕೊರೊನಾ ಪ್ರಕರಣ ಕಂಡು ಬಂದರೂ ಇಡೀ ಪ್ರದೇಶದ ಮೇಲೆ ನಿರ್ಬಂಧ ಹೇರಿ ಲಕ್ಷಾಂತರ ಟೆಸ್ಟ್‌ಗಳನ್ನು ಮಾಡಲಾಗುತ್ತಿದೆ. ನಿವೃತ್ತ **(5ನೇ ಪುಟಕ್ಕೆ)**

## ಸತತ 3ನೇ ದಿನ ತೈಲ ಬೆಲೆ ಹೆಚ್ಚಳ

ನವದೆಹಲಿ, ಅ. 22 – ಶುಕ್ರವಾರ ಸತತ ಮೂರನೇ ದಿನ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳು ಏರಿಕೆಯಾಗಿವೆ. ಮೂರೂ ದಿನಗಳ ಕಾಲ ತೈಲ ಬೆಲೆಯನ್ನು 35 ಪೈಸೆ ಹೆಚ್ಚಿಸಲಾಗಿದೆ.

ಸೆಪ್ಟೆಂಬರ್ 28ರ ನಂತರ 19 ಬಾರಿ ತೈಲ ಬೆಲೆ ಹೆಚ್ಚಿಸಲಾಗಿದೆ. ತಿಂಗಳಲ್ಲಿ ಒಟ್ಟಾರೆ ತೈಲ ಬೆಲೆ ಲೀಟರ್‌ಗೆ 5.70 ರೂ. ಏರಿಕೆಯಾಗಿದೆ.

## ಶೇ.21 ಮಾತ್ರ ಲಸಿಕೆ : ಕಾಂಗ್ರೆಸ್

ನವದೆಹಲಿ, ಅ. 22 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಲಸಿಕೆಯ ವಿಷಯದಲ್ಲಿ ದೇಶದ ದಾರಿ ತಪ್ಪಿಸುತ್ತಿದ್ದಾರೆ. ಕೇವಲ ಶೇ.21ರಷ್ಟು ಜನರಿಗೆ ಮಾತ್ರ ಪೂರ್ಣ ಲಸಿಕೆ ನೀಡಲಾಗಿದೆ ಎಂದು ಕಾಂಗ್ರೆಸ್ ಹೇಳಿದೆ.

ವರ್ಷಾಂತ್ಯದ ಒಳಗೆ ಎಲ್ಲರಿಗೂ ಲಸಿಕೆ ನೀಡಲಾಗುವುದು ಎಂಬ ಭರವಸೆಯನ್ನು ಯಾವ ರೀತಿ ಈಡೇರಿಸಲಾಗುವುದು ಎಂಬ ಬಗ್ಗೆ ಶ್ವೇತ ಪತ್ರ ಹೊರಡಿಸುವಂತೆಯೂ ಕಾಂಗ್ರೆಸ್ ಒತ್ತಾಯಿಸಿದೆ.

ಕೊರೊನಾ ಕಾರಣದಿಂದ ಪ್ರಾಣ ಕಳೆದುಕೊಂಡ 4.53 ಲಕ್ಷ ಜನರ ಕುಟುಂಬಗಳಿಗೆ ಶ್ರದ್ಧಾಂಜಲಿ ಸಲ್ಲಿಸುವ ಬದಲು ಪ್ರಧಾನ **(2ನೇ ಪುಟಕ್ಕೆ)**

## ಅಣಬೇರು ಮಾಳಿಗೇರ ಶೇಖರಪ್ಪ ನಿಧನ



ದಾವಣಗೆರೆ ನಿಟುವಳ್ಳಿ 2ನೇ ಮೇನ್, 2ನೇ ಕ್ರಾಸ್, ಸೋಮೇಶ್ವರ ವಿದ್ಯಾಲಯ ಹತ್ತಿರದ ವಾಸಿ, ದಿ|| ಅಣಬೇರು ಮಾಳಿಗೇರ ನಾರಪ್ಪ ಮೇಷ್ಟ್ರು ಇವರ ತಮ್ಮನಾದ **ಶ್ರೀ ಅಣಬೇರು ಮಾಳಿಗೇರ ಶೇಖರಪ್ಪ** ಅವರು ದಿನಾಂಕ 22.10.2021ರ ಶುಕ್ರವಾರ ಮಧ್ಯಾಹ್ನ 11.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 84 ವರ್ಷ ವಯಸ್ಸಾಗಿತ್ತು.

ಮೃತರು ಪತ್ನಿ, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರವನ್ನು ದಿನಾಂಕ 23.10.2021ರ ಶನಿವಾರ ಬೆಳಿಗ್ಗೆ 9.30 ರವರೆಗೆ ದಾವಣಗೆರೆ ಸ್ವಗೃಹದಲ್ಲಿ ಇರಿಸಲಾಗುವುದು. ನಂತರ ಬೆಳಿಗ್ಗೆ 11.30 ಕ್ಕೆ ಸ್ವಗ್ರಾಮ ಅಣಬೇರು ಗ್ರಾಮದ ಸ್ವಂತ ಜಮೀನಿನಲ್ಲಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

ಇಂತಿ ದುಃಖತಪ್ತರು,
ಸಹೋದರ : ಅಣಬೇರು ರಾಜಣ್ಣ,
ಪುತ್ರರು : ಅಣಬೇರು ಸುರೇಶ್, ದಿ|| ಅಣಬೇರು ನಾಗರಾಜ ಹಾಗೂ ಮಾಳಿಗೇರ ವಂಶಸ್ಥರು
ಮೊ. : 99161 11999, 94489 80202




# ವಾಗೀಶ್ ಸ್ವಾಮಿ ಹುಟ್ಟುಹಬ್ಬ ಕೊರೊನಾ ವಾರಿಯರ್ಸ್‌ಗೆ ಸನ್ಮಾನ



ಮಲೇಬೆನ್ನೂರು, ಅ.22- ಪಟ್ಟಣದ ಬಿಜೆಪಿ ಮುಖಂಡ ಹಾಗೂ ಜಿ.ಪಂ. ಮಾಜಿ ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ ಅವರು ತಮ್ಮ 45ನೇ ವರ್ಷದ ಹುಟ್ಟುಹಬ್ಬವನ್ನು ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ರೋಗಿಗಳಿಗೆ ಹಾಲು, ಹಣ್ಣು ವಿತರಣೆ ಮಾಡುವ ಮೂಲಕ ಆಚರಿಸಿಕೊಂಡರು.

ಅಲ್ಲದೇ, ಕೊರೊನಾ ವಾರಿಯರ್ಸ್‌ಗಳಾದ ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ ಸೇರಿದಂತೆ ಆರೋಗ್ಯ ಕೇಂದ್ರದ ಎಲ್ಲಾ ವೈದ್ಯರಿಗೆ, ಸಿಬ್ಬಂದಿಗಳಿಗೆ ಮತ್ತು ಪಟ್ಟಣದ ಆಶಾ ಕಾರ್ಯಕರ್ತೆಯರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

ಈ ವೇಳೆ ಮಾತನಾಡಿದ ಬಿ.ಎಂ.ವಾಗೀಶ್ ಸ್ವಾಮಿ ಅವರು, 100 ಕೋಟಿ ಜನರಿಗೆ ಕೋವಿಡ್ ಲಸಿಕೆ ಹಾಕುವ ಮೂಲಕ ಭಾರತ ದೇಶ ಜಗತ್ತಿನ ಗಮನ ಸೆಳೆದಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಉತ್ತಮ ಆಡಳಿತ ದೇಶದ ಹಿರಿಮೆಯನ್ನು ಹೆಚ್ಚಿಸಿದೆ. ಕೊರೊನಾ ವೇಳೆ ಪ್ರಾಣ ಭಯ ತೊರೆದು ಹಗಲಿರುಳು ಕೆಲಸ ಮಾಡಿದ ವೈದ್ಯರಿಗೆ, ಸಿಬ್ಬಂದಿಗಳಿಗೆ, ಆಶಾ ಕಾರ್ಯಕರ್ತೆಯರಿಗೆ, ಪೌರ ಕಾರ್ಮಿಕರಿಗೆ ಎಷ್ಟು ಧನ್ಯವಾದ ಹೇಳಿದರೂ ಸಾಲದು ಎಂದರು.

ಹರಿಹರ ತಾ. ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟಿ ಲಿಂಗರಾಜು, ಭದ್ರಾ ಕಾಡಾ ಸದಸ್ಯ ಗೋವಿನಹಾಳ್ ರಾಜಣ್ಣ, ದಿಶಾ ಕಮಿಟಿ ಸದಸ್ಯ ಐರಣಿ ಅಣ್ಣಪ್ಪ, ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಬಿ.ಮಂಜುನಾಥ್, ಪಾನಿಪೂರಿ ರಂಗನಾಥ್, ಪುರಸಭೆ ನಾಮಿನಿ ಸದಸ್ಯರಾದ ಪಿ.ಆರ್. ರಾಜು, ಎ.ಕೆ.ಲೋಕೇಶ್, ಪುರಸಭೆಯ ಆಶ್ರಯ ಸಮಿತಿ ಸದಸ್ಯ ಬಿ.ಚಂದ್ರಪ್ಪ, ಬೆಣ್ಣೆಹಳ್ಳಿ ಬಸವರಾಜ್, ಹಾಲಿವಾಣದ ಮೋಹನ್, ಕೆ.ಜಿ.ರಂಗನಾಥ್, ಕೆ.ಜಿ.ಪರಮೇಶ್ವರಪ್ಪ, ಮುದೇಗೌಡ್ರ ತಿಪ್ಪೇಶ್, ಬಿ.ಬಸವರಾಜಪ್ಪ, ಹುಳ್ಳಳ್ಳಿ ಸಿದ್ದೇಶ್, ಉಡೇದರ ಸಿದ್ದೇಶ್, ಜಿ.ಪಿ.ಹನುಮಗೌಡ, ಜಿ. ಸುನೀಲ್ ಮತ್ತಿತರರು ಭಾಗವಹಿಸಿದ್ದರು.

# ಕೋವಿಡ್ ಮೂರನೇ ಅಲೆ ಬರಲಾರದು

### ಹಾವೇರಿ ಜಿಲ್ಲಾ ಬಿಜೆಪಿ ವೈದ್ಯಕೀಯ ಪ್ರಕೋಷ್ಟ ಸಂಚಾಲಕ ಡಾ. ಶಿವಪ್ರಕಾಶ್ ತಂಡಿ ವಿಶ್ವಾಸ



ರಾಣೇಬೆನ್ನೂರು, ಅ.22- ಸ್ವದೇಶಿ ತಜ್ಞರು, ವೈದ್ಯರು ತಯಾರಿಸಿದ ಲಸಿಕೆಯನ್ನು ದೇಶದ ನೂರು ಕೋಟಿ ಜನರಿಗೆ ಹಾಕಿದ್ದು ಮಹತ್ಸಾಧನೆ. ಇದು ಪ್ರಧಾನಿ ಮೋದಿಯಂತವರಿಂದ ಮಾತ್ರ ಸಾಧ್ಯ ಎಂದು ಹಾವೇರಿ ಜಿಲ್ಲಾ ಬಿಜೆಪಿ ವೈದ್ಯಕೀಯ ಪ್ರಕೋಷ್ಟದ ಸಂಚಾಲಕ ಡಾ. ಶಿವಪ್ರಕಾಶ್ ತಂಡಿ ಹೇಳಿದರು.

ದೇಶದಲ್ಲಿ ನಡೆದ ಲಸಿಕೆ ಅಭಿಯಾನದ ಬಗ್ಗೆ ಸಂತಸ ಹಂಚಿಕೊಂಡು ವಾರಿಯರ್ಸ್‌ಗೆ ಸನ್ಮಾನ ಮಾಡಿ ಅವರು ಮಾತನಾಡಿದರು.

ಯಾರು ಎಷ್ಟೇ ಅಪಪ್ರಚಾರ ಮಾಡಿದರೂ ಸಹ ಜನತೆ, ವೈದ್ಯರು, ಅಂಗನವಾಡಿ ಎಲ್ಲರೂ ನೀಡಿದ ಸಹಕಾರ ಈ ಸಾಧನೆಗೆ ಕಾರಣವಾಯಿತು. ಜಗತ್ತೇ ನಮ್ಮತ್ತ ನೋಡುವಂತಹ ಈ ಕಾರ್ಯದಿಂದ ಕೋವಿಡ್ ಮೂರನೇ ಅಲೆ ಬರಲಾರದು ಎಂದು ಡಾ. ತಂಡಿ ವಿಶ್ವಾಸ ವ್ಯಕ್ತಪಡಿಸಿದರು.

ಅತ್ಯಂತ ಪ್ರಬಲ ರಾಷ್ಟ್ರ, ಜಗತ್ತಿನ ದೊಡ್ಡಣ್ಣ ಖ್ಯಾತಿಯ 33 ಕೋಟಿ ಜನಸಂಖ್ಯೆಯ ಅಮೇರಿಕದಲ್ಲಿ ಕೋವಿಡ್‌ನಿಂದ 8 ಲಕ್ಷ ಜನ ಮರಣ ಹೊಂದಿದರು. ನಮ್ಮ ದೇಶದ 130 ಕೋಟಿ ಜನಸಂಖ್ಯೆಯಲ್ಲಿ ಕೇವಲ 2 ಲಕ್ಷಕ್ಕೂ ಕಡಿಮೆ ಜನ ಮರಣ ಹೊಂದಿದ್ದಾರೆ. ಎಲ್ಲವನ್ನು ಎದುರಿಸುವ ಶಕ್ತಿ ಭಾರತಕ್ಕಿದೆ. ಇದು ನಮ್ಮ ಪ್ರಧಾನಿ ಮೋದಿ ಅವರ ಹೆಮ್ಮೆಯ ಸಾಧನೆ ಎಂದು ಬಿಜೆಪಿ ನೇಕಾರ ಪ್ರಕೋಷ್ಟದ ಸಂಚಾಲಕ ಹಾಗೂ ಸಾರಿಗೆ ನಿಗಮದ ಉಪಾಧ್ಯಕ್ಷ ಡಾ. ಬಸವರಾಜ ಕೇಲಗಾರ ಹೇಳಿದರು.

ಸಮಾಜದ ಪ್ರತಿಯೊಬ್ಬರೂ ನೀಡಿದ ಸಹಾಯ, ಸಹಕಾರದಿಂದ ಈ ಸಂಕಷ್ಟ ಪರಿಸ್ಥಿತಿಯನ್ನು ಸರಿದಾರಿಗೆ ತರಲು ಸಾಧ್ಯವಾಯಿತು ಎಂದು ಸನ್ಮಾನಿತರ ಪರವಾಗಿ ಮಾತನಾಡಿದ ಅರಿವಳಿಕೆ ತಜ್ಞ ಡಾ. ನಾಗರಾಜ ಹೇಳಿದರು.

ವೇದಿಕೆಯಲ್ಲಿ ತಾಲ್ಲೂಕು ಪ್ರಕೋಷ್ಟದ ಸಂಚಾಲಕ ಡಾ. ರವಿ ಕುಲ್ಕರ್ಣಿ, ನಗರಸಭೆ ಮಾಜಿ ಅಧ್ಯಕ್ಷ ಡಾ. ಗಣೇಶ ದೇವಗಿರಿಮಠ, ಡಾ. ಜ್ಯೋತಿ ತಂಡಿ ಮತ್ತಿತರರಿದ್ದರು. ಶಿವಾನಂದ ಬಗಾದಿ ಸ್ವಾಗತಿಸಿದರು.

# ಪರಿಸ್ಥಿತಿ ಅವಲೋಕಿಸಿ ಎಲ್‌ಕೆಜಿ ಆರಂಭಕ್ಕೆ ಚಿಂತನೆ


**(1ನೇ ಪುಟದಿಂದ)** ಕೊರೊನಾ ಮೂರನೇ ಅಲೆ ನಮ್ಮನ್ನು ಬಾಧಿಸುವುದಿಲ್ಲ ಎಂದು ಮನಗಂಡು ತಜ್ಞರು ನೀಡಿದ ವರದಿ ಆಧಾರದ ಮೇಲೆ ಒಂದರಿಂದ ಐದನೇ ತರಗತಿಗಳನ್ನು ಪ್ರಾರಂಭಿಸುತ್ತಿದ್ದೇವೆ, ಇದರ ನಂತರ ಪರಿಸ್ಥಿತಿ ಅವಲೋಕಿಸಿ ಎಲ್‌ಕೆಜಿ ಮತ್ತು ಯುಕೆಜಿ ಮಕ್ಕಳನ್ನು ಶಾಲೆಗೆ ಕರೆತರುವ ಧೈರ್ಯ ತೋರುತ್ತೇವೆ ಎಂದರು. ಶಾಲೆಯನ್ನು ಆರಂಭಿಸುವ ಎಲ್ಲಾ ಪ್ರಯತ್ನದಲ್ಲೂ ನಾವು ಶೇ. 80 ರಷ್ಟು ಯಶಸ್ವಿಯಾಗಿದ್ದೇವೆ. ಆದರೆ ಇನ್ನು ಶೇ. 20 ರಷ್ಟು ಯಶಸ್ವಿಯಾಗಬೇಕಿದೆ. ಗ್ರಾಮೀಣ ಭಾಗದಲ್ಲಿ ಶಾಲೆಯಿಂದ ದೂರ ಉಳಿದಿರುವ ಮಕ್ಕಳನ್ನು ಕರೆತರುವ ಪ್ರಯತ್ನ ನಿರಂತರವಾಗಿ ನಡೆದಿದೆ, ಕೆಲವೆಡೆ ದೊಡ್ಡ ಮಕ್ಕಳೇ ಎಲ್ಲಿ ಹೋಗಿದ್ದಾರೆ ಎಂಬುದು ತಿಳಿಯುತ್ತಿಲ್ಲ. ಅಂತಹವರನ್ನು ಪತ್ತೆ ಹಚ್ಚುವ ಕೆಲಸ ನಡೆದಿದೆ.

ನಮ್ಮ ಇಲಾಖೆ ಜೊತೆಗೆ ಸ್ವಯಂ ಸೇವಾ ಸಂಸ್ಥೆಗಳನ್ನು ಬಳಸಿಕೊಂಡು, ಮನೆ-ಮನೆಗೆ ಹೋಗಿ ಮಕ್ಕಳನ್ನು ಕರೆತರುವ ಕೆಲಸ ಮಾಡಿದ್ದೇವೆ. ಶಾಲೆಗೆ ಬಾರದ ಮಕ್ಕಳಿಗೆ ಮನೆ ಬಾಗಿಲಿನಲ್ಲೇ ಸಂಚಾರ ಕಲಿಕಾ ಬಸ್ ಮೂಲಕ ವ್ಯಾಸಂಗಕ್ಕೆ ಅಗತ್ಯ ಕ್ರಮ ಕೈಗೊಳ್ಳುತ್ತಿದ್ದೇವೆ ಎಂದವರು ಹೇಳಿದ್ದಾರೆ.

ಪ್ರಾಥಮಿಕ ಹಂತದಲ್ಲಿ ಶಿಕ್ಷಕರ ಕೊರತೆ ಇಲ್ಲ, 6ರಿಂದ 8 ನೇ ತರಗತಿವರೆಗೆ ಕೊರತೆ ಇದೆ, ಅದನ್ನು ತುಂಬುವ ಕೆಲಸ ಮಾಡುತ್ತೇವೆ ಎಂದು ಸಚಿವ ನಾಗೇಶ್ ಇದೇ ಸಂದರ್ಭದಲ್ಲಿ ಹೇಳಿದ್ದಾರೆ.

ಹದಿನೆಂಟು ವರ್ಷದ ಕೆಳಗಿನ ಮಕ್ಕಳಿಗೆ ನವೆಂಬರ್ ಮೊದಲ ವಾರದಲ್ಲಿ ಲಸಿಕೆ ದೊರೆಯುವ ಸಾಧ್ಯತೆ ಇದೆ. ಒಂದು ವೇಳೆ ನಮಗೆ ದೊಡ್ಡ ಪ್ರಮಾಣದಲ್ಲಿ ಲಸಿಕೆ ದೊರೆತರೆ, ಶಾಲೆಗಳಲ್ಲೇ ಮಕ್ಕಳಿಗೆ ಸಾಮೂಹಿಕವಾಗಿ ಲಸಿಕೆ ಹಾಕುವ ಬಗ್ಗೆ ಚಿಂತನೆ ಮಾಡಿದ್ದೇವೆ ಎಂದರು.

# ಭರಮಸಾಗರ : ಕೊರೊನಾ ವಾರಿಯರ್ಸ್‌ಗೆ ಸನ್ಮಾನ



ಭರಮಸಾಗರ, ಅ.22- ದೇಶದಲ್ಲಿ ಇದುವರೆಗೆ ದಾಖಲೆಯ 100 ಕೋಟಿ ಕೋವಿಡ್ ಲಸಿಕೆ ನೀಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ನಾಯಕತ್ವ, ಆರೋಗ್ಯ ಕಾರ್ಯಕರ್ತರ ಶ್ರಮ, ಶಿಸ್ತಿನ ನಾಗರಿಕರು ಭಾಗವಹಿಸಿ ಈ ಪರಿಹಾರಕ್ಕೆ ಕಾರಣರಾಗಿದ್ದಾರೆ ಎಂದು ಬಿಜೆಪಿ ಘಟಕದ ಅಧ್ಯಕ್ಷ ಚವಲಿಹಳ್ಳಿ ಶೈಲೇಶ್ ಕುಮಾರ್ ಹೇಳಿದರು.

ಸ್ಥಳೀಯ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ನಿನ್ನೆ ಏರ್ಪಡಿಸಿದ್ದ ವೈದ್ಯರು, ಆಶಾ ಕಾರ್ಯಕರ್ತೆಯರು, ಸಿಬ್ಬಂದಿಗಳಿಗೆ ಬಿಜೆಪಿ ವತಿಯಿಂದ ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಯುವ ಮುಖಂಡ ಡಿ.ಎಸ್. ಪ್ರದೀಪ ಕುಮಾರ್ ಮಾತನಾಡಿ, ವೈದ್ಯರು, ಆಸ್ಪತ್ರೆ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು ಸೇರಿದಂತೆ ಅನೇಕರು ಕೊರೊನಾ ತಡೆಯುವಲ್ಲಿ ಶ್ರಮಿಸಿದ್ದಾರೆ. ಅವರಿಗೆ ಎಷ್ಟೇ ಅಭಿನಂದಿಸಿದರೂ ಸಾಲದು ಎಂದರು.

ಆಡಳಿತ ವೈದ್ಯಾಧಿಕಾರಿ ಡಾ. ವಿನಯರಾಜ್, ಡಾ. ಮೋಹನ್, ಡಾ. ಸೌಂದರ್ಯ, ಡಾ. ಕೃಷ್ಣ, ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು ಸೇರಿದಂತೆ 60 ಜನ ಕೊರೊನಾ ವಾರಿಯರ್ಸ್‌ಗಳನ್ನು ಸನ್ಮಾನಿಸಲಾಯಿತು.

ಗ್ರಾಮದ ಹಿರಿಯರಾದ ಡಿ.ವಿ. ಶರಣಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ಸಿರಿಗೆರೆ ಕಾರ್ಯದರ್ಶಿ ಬಸವರಾಜ್, ಶಕ್ತಿ ಕೇಂದ್ರದ ಅಧ್ಯಕ್ಷ ಪಿಗ್ಮಿ ಚಂದ್ರು, ಕೆಇಬಿ ನಿವೃತ್ತ ಇಂಜಿನಿಯರ್ ಚಂದ್ರಣ್ಣ, ಬಿಜೆಪಿ ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಡಿ. ಅಂಜಿನಪ್ಪ, ಹಿರಿಯ ಕಾರ್ಯಕರ್ತರಾದ ಎಸ್. ನಾರಾಯಣರಾವ್, ಎ.ಎಸ್. ಸಿದ್ಧಲಿಂಗಪ್ಪ, ಪತ್ರಕರ್ತ ಬಿ.ಜೆ. ಅನಂತಪದ್ಮನಾಭ ರಾವ್ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಆಂಜನೇಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಿ. ಲೋಲಾಕ್ಷಮ್ಮ ಸ್ವಾಗತಿಸಿದರು.

## ಹರಪನಹಳ್ಳಿ : ಬಿಸಿಯೂಟ ಆರಂಭ




ಹರಪನಹಳ್ಳಿ, ಅ.22- ಕಳೆದ ಒಂದೂವರೆ ವರ್ಷಗಳಿಂದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಸ್ಥಗಿತಗೊಂಡಿದ್ದ ಮಧ್ಯಾಹ್ನದ ಬಿಸಿಯೂಟ ಯೋಜನೆ ತಾಲ್ಲೂಕಿನಲ್ಲಿ ಗುರುವಾರದಿಂದ ಯಶಸ್ವಿಯಾಗಿ ಆರಂಭಗೊಂಡಿತು.

6 ಹಾಗೂ 7ನೇ ತರಗತಿಗಳ 146 ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಆರಂಭವಾದ ಬಿಸಿಯೂಟದ ಆರಂಭದ ದಿನ ಗೋದಿ ಪಾಯಸ, ಕೇಸರಿ ಬಾತ್, ಹೆಸರು ಬೇಳೆ ಪಾಯಸ ಹೀಗೆ ಸಿಹಿ ಊಟ ಹಾಗೂ ಪುಳಿಯೋಗರೆ, ಅನ್ನ ಸಾಂಬಾರು, ಚಿತ್ರಾನ್ನವನ್ನು ವಿದ್ಯಾರ್ಥಿಗಳಿಗೆ ಬಡಿಸಲಾಯಿತು.

ಈ ಕುರಿತು ಪ್ರತಿಕ್ರಿಯೆ ನೀಡಿದ ಕ್ಷೇತ್ರ ಶಿಕ್ಷಣಾಧಿಕಾರಿ ವೀರಭದ್ರಯ್ಯ, ಬಹಳ ದಿನಗಳ ನಂತರ ಬಿಸಿಯೂಟ ಆರಂಭವಾಗಿದೆ. ವಿದ್ಯಾರ್ಥಿಗಳು ಖುಷಿಗೊಂಡಿದ್ದಾರೆ. ನಾನು 11 ಶಾಲೆಗಳಿಗೆ ಭೇಟಿ ನೀಡಿದ್ದು, ಎಲ್ಲಾ ಕಡೆ ಯಶಸ್ಸು ಕಂಡಿದೆ ಎಂದು ಹೇಳಿದರು. ಇಸಿಓ ಗಿರಜ್ಜಿ ಮಂಜುನಾಥ್ ಯಾವುದೇ ಸಮಸ್ಯೆ ಇಲ್ಲದೆ ಉತ್ತಮವಾಗಿ ಬಿಸಿಯೂಟ ಯೋಜನೆ ಆರಂಭಗೊಂಡಿದೆ ಎಂದು ಸಂತಸ ವ್ಯಕ್ತ ಪಡಿಸಿದರು.

## ಸ್ಯಾಮ್‌ಸಂಗ್ ಸ್ಮಾರ್ಟ್ ಕೆಫೆ ಉದ್ಘಾಟನೆ




ಹರಿಹರ, ಅ.22- ಇಲ್ಲಿನ ಗಾಂಧಿ ಮೈದಾನದ ಕಾಂಪ್ಲೆಕ್ಸ್‌ನಲ್ಲಿ ಸ್ಯಾಮ್‌ಸಂಗ್ ಸ್ಮಾರ್ಟ್ ಕೆಫೆ (ರವಿ ಟೆಲಿಕಾಂ) ಮಳಿಗೆಯನ್ನು ಶುಕ್ರವಾರ ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಜಿಲ್ಲೆಯ ಸ್ಯಾಮ್‌ಸಂಗ್ ಮೊಬೈಲ್ ವಿತರಕ ಎಸ್.ಕೆ.ಪ್ರಶಾಂತ್ ಗುಪ್ತಾ, ರವಿ ಟೆಲಿಕಾಂ ಮಾಲೀಕ ಹಾಗೂ ಹರಿಹರ ಬಿಜೆಪಿ ಎಸ್ಸಿ ಮೋರ್ಚಾ ಅಧ್ಯಕ್ಷ ರವಿರಾಜ್, ನಗರಸಭೆ ಸದಸ್ಯ ಆಟೋ ಹನುಮಂತಪ್ಪ, ವಕೀಲ ಆರ್.ಪಿ.ರುದ್ರಗೌಡ, ನೇಮಿಚಂದ್, ಎಸ್. ಜಯಣ್ಣ ಮತ್ತಿತರರು ಹಾಜರಿದ್ದರು.

## ಶೇ.21 ಮಾತ್ರ ಲಸಿಕೆ : ಕಾಂಗ್ರೆಸ್

**(1ನೇ ಪುಟದಿಂದ)** ಮಂತ್ರಿ ಸಂಭ್ರಮಿಸುತ್ತಿದ್ದಾರೆ ಎಂದು ಕಾಂಗ್ರೆಸ್ ವಕ್ತಾರ ಗೌರವ್ ವಲ್ಲಭ್ ಹೇಳಿದ್ದಾರೆ. 100 ಕೋಟಿ ಡೋಸ್ ಲಸಿಕೆ ನೀಡಿದ ಮೊದಲ ದೇಶ ಭಾರತ ಎಂದು ಪ್ರಧಾನಿ ಹೇಳಿರುವುದು ಸುಳ್ಳು. ಚೀನಾ ಕಳೆದ ಸೆಪ್ಟೆಂಬರ್ ವೇಳೆಗೆ 216 ಕೋಟಿ ಡೋಸ್ ಲಸಿಕೆ ನೀಡಿದೆ. ಚೀನಾ ತನ್ನ ಶೇ.80ರಷ್ಟು ಜನರಿಗೆ ಎರಡು ಡೋಸ್ ಲಸಿಕೆ ನೀಡಿದ್ದರೆ, ಭಾರತ ಶೇ.20ರಷ್ಟು ಜನರಿಗೆ ಮಾತ್ರ ಎರಡು ಡೋಸ್ ಲಸಿಕೆ ನೀಡಿದೆ ಎಂದೂ ಅವರು ಹೇಳಿದ್ದಾರೆ.

# ಕ್ರೀಡಾಕ್ಷೇತ್ರ ಬಲ ಪಡಿಸಲು ಒತ್ತು

**(1ನೇ ಪುಟದಿಂದ)** ನೌಕರರ ಸಂಘದ ರಾಜ್ಯಾಧ್ಯಕ್ಷರು ಎಲ್ಲರನ್ನೂ ಸಂಘಟಿಸಿ ಕೊಂಡು, ನೌಕರರ ಬಗ್ಗೆ ಕಾಳಜಿ ವಹಿಸುತ್ತಿದ್ದಾರೆ. ಯಾರು ತಮ್ಮ ಬಗ್ಗೆ ಕಾಳಜಿ ವಹಿಸುತ್ತಾರೋ ಅವರಿಗೆ ನೀವು ಸಹಕರಿಸಬೇಕು ಎಂದು ಹೇಳಿದರು.

ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಕ್ಷರಿ, ರಾಜ್ಯ ಸರ್ಕಾರಿ ನೌಕರರ ಹೊಸ ಪಿಂಚಣಿ ಯೋಜನೆ ರದ್ದು ಗೊಳಿಸಿ, ದೇಶದಲ್ಲಿಯೇ ರಾಜ್ಯದ ಸರ್ಕಾರಿ ನೌಕರರು ಅತಿ ಕಡಿಮೆ ವೇತನ ಪಡೆಯುತ್ತಿದ್ದು ವೇತನ ತಾರತಮ್ಯವನ್ನು ಸರಿಪಡಿಸಬೇಕು ಎಂದು ಆಗ್ರಹಿಸಿದರು.

2022ಕ್ಕೆ ಹೊಸ ವೇತನ ಆಯೋಗ ಪಡೆಯಬೇಕಿದೆ. ಈ ಕುರಿತು 2-3 ತಿಂಗಳಲ್ಲಿ ಬೆಂಗಳೂರಿನ ಪ್ಯಾಲೇಸ್ ಗ್ರೌಂಡ್‌ನಲ್ಲಿ 6 ಲಕ್ಷ ನೌಕರರನ್ನು ಸೇರಿಸಿ ಸರ್ಕಾರದ ಗಮನ ಸೆಳೆಯಲಾಗುವುದು. ಕ್ರೀಡಾ ಹಾಗೂ ನಗರಾಭಿವೃದ್ಧಿ ಸಚಿವರುಗಳು ನಮ್ಮ ಬೇಡಿಕೆ ಈಡೇರಿಸುವಂತೆ ಮುಖ್ಯಮಂತ್ರಿಗಳಿಗೆ ಒತ್ತಾಯಿಸಬೇಕು ಎಂದು ಹೇಳಿದರು.

ಕೇಂದ್ರ ಸರ್ಕಾರ ಈಗಾಗಲೇ ಶೇ.3ರಷ್ಟು ತುಟ್ಟಿಭತ್ಯೆ ಹೆಚ್ಚಳ ಮಾಡಿದ್ದು, ರಾಜ್ಯ ಸರ್ಕಾರದಿಂದಲೂ ವಾರದೊಳಗೆ ತುಟ್ಟಿಭತ್ಯೆ ಹೆಚ್ಚಳ ಮಾಡುವಂತೆ ಒತ್ತಾಯಿಸುತ್ತೇವೆ. ಕಳೆದ ಎರಡೂ ವರೆ ವರ್ಷದಲ್ಲಿ ಸಂಘದಿಂದ ಅನೇಕ ಉತ್ತಮ ಕೆಲಸಗಳಾಗಿವೆ ಎಂದು ಹೇಳಿದರು.

ಸರ್ಕಾರಿ ನೌಕರರ 25 ಲಕ್ಷ ಸದಸ್ಯರಿಗೆ ರಾಜ್ಯದ ಎಲ್ಲಾ ಆಸ್ಪತ್ರೆಗಳಲ್ಲಿ ನಗದು ರಹಿತ ಚಿಕಿತ್ಸೆ ನೀಡುವ ಯೋಜನೆಯು ಮುಂದಿನ ತಿಂಗಳು ಜಾರಿಗೆ ಬರಲಿದೆ. 20-25 ವರ್ಷಗಳಿಂದ ಆಗದ 18 ಸರ್ಕಾರಿ ಆದೇಶಗಳು ಕಳೆದ ಎರಡು ವರ್ಷಗಳಲ್ಲಿ ಬಿ.ಎಸ್. ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಅವರ ಆಡಳಿತಾವಧಿಯಲ್ಲಾಗಿವೆ. ಕ್ರೀಡಾಕೂಟಕ್ಕಾಗಿ ಸರ್ಕಾರ 2 ಕೋಟಿ ರೂ. ಅನುದಾನ ನೀಡಿರುವುದು ಅಭಿನಂದನೀಯ ಎಂದರು.

ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಜಿ.ಪಂ. ಸಿಇಒ ಡಾ. ವಿಜಯಮಹಾಂತೇಶ್ ಬಿ.ದಾನಮ್ಮನವರ, ಎಸ್ಪಿ ಸಿ.ಬಿ. ರಿಷ್ಯಂತ್, ರಾಜ್ಯ ಸರ್ಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಜಗದೀಶ್ ಗೌಡಪ್ಪ ಪಾಟೀಲ, ಖಜಾಂಚಿ ಆರ್.ಶ್ರೀನಿವಾಸ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಬಿ.ಶ್ರೀನಿವಾಸ್, ವಿವಿಧ ಜಿಲ್ಲೆಗಳ ಸಂಘದ ಜಿಲ್ಲಾಧ್ಯಕ್ಷರುಗಳು ಉಪಸ್ಥಿತರಿದ್ದರು. ಸಂಘದ ಜಿಲ್ಲಾಧ್ಯಕ್ಷ ಬಿ.ಪಾಲಾಕ್ಷಿ ಅತಿಥಿಗಳನ್ನು ಸ್ವಾಗತಿಸಿದರು.

## ರೂಪಾಂತರಿ ಬಾರದ ಹೊರತು ಭೀಕರವಾಗದು

**(1ನೇ ಪುಟದಿಂದ)** ಪ್ರಕರಣಗಳ ಸಂಖ್ಯೆ 30 ಸಾವಿರಕ್ಕೂ ಕಡಿಮೆ ಇದೆ.

ಭಾರತದಲ್ಲಿ ಕೊರೊನಾದಿಂದ ಸಾವನ್ನಪ್ಪುವವರ ಪ್ರಮಾಣ ಆರಂಭದಿಂದಲೂ ಶೇ.1.2ರ ಹಂತದಲ್ಲಿ ಸ್ಥಿರವಾಗಿದೆ. ಇದು ಲಸಿಕೆ ನೀಡುವ ಪ್ರಮಾಣ ಹೆಚ್ಚಿಸಬೇಕು ಎಂಬುದನ್ನು ತೋರಿಸುತ್ತದೆ ಎಂದು ಜಮೀಲ್ ಅಭಿಪ್ರಾಯ ಪಟ್ಟಿದ್ದಾರೆ.

ಸೋಂಕೊಂದು ಹರಡಿದ್ದರೂ ಸಹ, ಅದರ ಪರಿಣಾಮ ನಿರ್ವಹಿಸಬಹುದಾದ ಹಂತದಲ್ಲಿದ್ದರೆ ಅದನ್ನು ಅಂತ್ಯಗೊಳ್ಳುವ ಹಂತ (ಎಂಡೆಮಿಕ್) ಎಂದು ಪರಿಗಣಿಸಲಾಗುತ್ತದೆ.

ಕೊರೊನಾ ಪ್ರಕರಣಗಳು ಕಡಿಮೆಯಾದ ಮಾತ್ರಕ್ಕೆ ಸೋಂಕು ಅಂತ್ಯವಾಗುವುದಿಲ್ಲ. ದೇಶದ ಕೆಲ ಭಾಗಗಳಲ್ಲಿ ಸೋಂಕು ಕಡಿಮೆಯಾಗಿದೆ. ಆದರೆ, ಇನ್ನು ಕೆಲ ಭಾಗಗಳಲ್ಲಿ ಮಾಹಿತಿ ಸುಲಭವಾಗಿ ಲಭ್ಯವಾಗುತ್ತಿಲ್ಲ ಎಂದು ಬ್ರಿಟನ್‌ನ ಮಿಡ್ಲ್‌ಸೆಕ್ಸ್ ವಿಶ್ವವಿದ್ಯಾನಿಲಯದ ಹಿರಿಯ ಗಣಿತ ಉಪನ್ಯಾಸಕ ಮುರಾದ್ ಬಪನಜಿ ಹೇಳಿದ್ದಾರೆ. ಅವರು ಭಾರತದಲ್ಲಿ ಕೊರೊನಾದ ಅಧ್ಯಯನ ನಡೆಸಿದ್ದು, ಹಲವಾರು ಮಾದರಿಗಳನ್ನು ರೂಪಿಸಿದ್ದಾರೆ.

ಈ ನಿಲುವನ್ನು ಬೆಂಬಲಿಸಿರುವ ಸೋಂಕು ರೋಗಗಳ ಪರಿಣಿತ ರಮಣನ್ ಲಕ್ಷ್ಮಿನಾರಾಯಣನ್, ರೋಗ ಹರಡುವುದು ಅಂತಿಮ ಹಂತದಲ್ಲಿದ್ದರೂ ಸಹ, ಆಗಾಗ ಸೋಂಕು ಹಠಾತ್ತನೇ ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಬ್ರಿಟನ್‌ನಲ್ಲಿ ಇದೇ ಪರಿಸ್ಥಿತಿ ಕಂಡು ಬಂದಿದೆ ಎಂದಿದ್ದಾರೆ.

ಕೊರೊನಾದಿಂದ ದೇಶಕ್ಕೆ ಇನ್ನೂ ಅಪಾಯ ಇದೆಯೇ ಎಂಬ ಬಗ್ಗೆ ಖಚಿತ ಪಡಿಸಿಕೊಳ್ಳಲು ಎರಡು ತಿಂಗಳಾದರೂ ಬೇಕಾಗುತ್ತದೆ ಎಂದವರು ತಿಳಿಸಿದ್ದಾರೆ.

ಭಾರತದಲ್ಲಿ ಕೊರೊನಾ ಪ್ರಕರಣಗಳು ಇನ್ನೂ ಕೆಲ ಕಾಲ ಸ್ಥಳೀಯ ಮಟ್ಟದಲ್ಲಿ ಹೆಚ್ಚಾಗುವುದು ಮುಂದುವರೆಯಲಿದೆ. ಆದರೆ, ಎರಡನೇ ಅಲೆಯಷ್ಟು ಭೀಕರ ಸ್ವರೂಪ ತಳೆಯುವ ಸಾಧ್ಯತೆ ಕಡಿಮೆ ಎಂದು ಹಲವಾರು ಪರಿಣಿತರು ಹೇಳಿದ್ದಾರೆ.

ಇತ್ತೀಚೆಗೆ ಕಂಡು ಬರುತ್ತಿರುವ ಕೊರೊನಾ ಸೋಂಕು ಪ್ರಕರಣಗಳು ಹಾಗೂ ಲಸಿಕೆ ನೀಡುವ ಪ್ರಮಾಣ ಎರಡೂ ನಿರೀಕ್ಷಿತ ಮಟ್ಟದಲ್ಲೇ ಇವೆ. ಮುಂದಿನ ಕೆಲ ತಿಂಗಳಲ್ಲಿ ದೊಡ್ಡ ಅಲೆ ಬರುವ ಸಾಧ್ಯತೆ ಕಡಿಮೆ ಎಂದು ಬನಜಿ ತಿಳಿಸಿದ್ದಾರೆ.

ಹೊಸ ರೂಪಾಂತರಿಯ ಅಪಾಯ ಇದ್ದೇ ಇದೆ. ಹೊಸ ರೂಪಾಂತರಿ ವೇಗವಾಗಿ ಹರಡಿದರೆ ಮತ್ತು ಲಸಿಕೆ ಪಡೆದವರಲ್ಲೂ ಸೋಂಕು ಬಂದರೆ ಅಪಾಯ ತರುತ್ತದೆ ಎಂದವರು ತಿಳಿಸಿದ್ದಾರೆ.

## ಚಿಕ್ಕಜಾಜೂರು-ಚಿತ್ರದುರ್ಗ ರೈಲ್ವೆ ಮಾರ್ಗದ ಪರಿಶೀಲನೆ

**(1ನೇ ಪುಟದಿಂದ)** ಸಾರ್ವಜನಿಕರು ರೈಲ್ವೆ ಮಾರ್ಗವನ್ನು ಉಲ್ಲಂಘಿಸುವುದು ಜೀವಕ್ಕೆ ಅಪಾಯ ತರುತ್ತದೆ. ಆ ರೀತಿಯ ಕೃತ್ಯ ಎಸಗುವವರ ವಿರುದ್ಧ ಪ್ರಕರಣ ದಾಖಲಿಸಲಾಗುವುದು ಎಂದು ನೈರುತ್ಯ ರೈಲ್ವೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.


## ಜಿಗಳಿ ಗ್ರಾಮದ ಶ್ರೀಮತಿ ಕಸ್ತೂರಮ್ಮ ನಿಧನ



ಹರಿಹರ ತಾಲ್ಲೂಕು ಜಿಗಳಿ ಗ್ರಾಮದ
ಮಲ್ಲನಗೌಡ್ರ ಬಸವನಗೌಡ ಅವರ ಧರ್ಮಪತ್ನಿ
**ಶ್ರೀಮತಿ ಕಸ್ತೂರಮ್ಮ** (68 ವರ್ಷ)
ಇವರು ದಿನಾಂಕ 22.10.2021 ರ ಶುಕ್ರವಾರ ಸಾಯಂಕಾಲ 5.30ಕ್ಕೆ ನಿಧನರಾದರು. ಪತಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 23.10.2021 ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಜಿಗಳಿಯಲ್ಲಿರುವ ಮೃತರ ತೋಟದಲ್ಲಿ ನೆರವೇರಲಿದೆ.

**ದು:ಖತಪ್ತರು : ಮಲ್ಲನಗೌಡ್ರ ವಂಶಸ್ಥರು ಮತ್ತು ಬಂಧು-ಮಿತ್ರರು**

## ಶಿವಗಣಾರಾಧನೆ ಆಹ್ವಾನ ಪತ್ರಿಕೆ



॥ ಶ್ರೀ ಕೊಟ್ಟೂರು ಗುರುಬಸವೇಶ್ವರ ಪ್ರಸನ್ನ ॥
ದಾವಣಗೆರೆ ನಗರ, ಮೈಸೂರು ಮಠದ ಗಲ್ಲಿ ವಾಸಿಗಳಾದ
**ದುರ್ಗದ ಇಟಗಿ ಜಯದೇವಪ್ಪ**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 15-10-2021ನೇ ಶುಕ್ರವಾರ ಬೆಳಿಗ್ಗೆ 11-30 ಕ್ಕೆ ನನ್ನ ತಮ್ಮನಾದ
**ಶ್ರೀ ಡಿ.ಇ. ಶಿವಶಂಕರ್**
ನಿವೃತ್ತ ಮ್ಯಾನೇಜರ್, ಡಿ.ಯು.ಸಿ. ಬ್ಯಾಂಕ್, ದಾವಣಗೆರೆ.
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಶಿವಗಣಾರಾಧನೆ'ಯನ್ನು**
ದಿನಾಂಕ : 23-10-2021ನೇ ಶನಿವಾರ ಮಧ್ಯಾಹ್ನ 12 ಗಂಟೆಗೆ
**ಶ್ರೀ ವಿರಕ್ತ ಮಠ, ದೊಡ್ಡಪೇಟೆ, ದಾವಣಗೆರೆಯಲ್ಲಿ**
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
**ಮೃತರ ಧರ್ಮಪತ್ನಿ ಶ್ರೀಮತಿ ಶಾಂತ, ಮಗಳು ಅನುಷ, ಅಳಿಯ ಎ.ವಿ. ವಿನಯ್, ದುರ್ಗದ ಇಟಗಿ ಜಯದೇವಪ್ಪ ಮತ್ತು ಸಹೋದರರು, ಇಟಗಿ ವಂಶಸ್ಥರು ಹಾಗೂ ಬಂಧು-ಮಿತ್ರರು.**


# ಮಲ್ಲಶೆಟ್ಟಿಹಳ್ಳಿ : ಹೆದ್ದಾರಿ ಬಳಿ ಸೇತುವೆಗೆ ಆಗ್ರಹ

**(1ನೇ ಪುಟದಿಂದ)** ಸೇರಿದಂತೆ, ಇತರೆ ರೈತ ಮುಖಂಡರ ನೇತೃತ್ವದಲ್ಲಿ ಮಲ್ಲಶೆಟ್ಟಿಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಬೆಳಿಗ್ಗೆಯಿಂದಲೇ ಪ್ರತಿಭಟನೆಗಿಳಿದರು. ಹೆದ್ದಾರಿ ತಡೆಗೂ ಸಿದ್ಧಗೊಂಡ ವೇಳೆ ಮೊದಲಿಗೆ ಪೊಲೀಸರು ಅವಕಾಶ ನೀಡದೇ ಹೆದ್ದಾರಿ ತಡೆ ನಡೆಸದಂತೆ ಮನವೊಲಿಸಲು ಯತ್ನಿಸಿದರು.

ರೈತ ಸಂಘದ ಪ್ರಧಾನ ಕಾರ್ಯದರ್ಶಿ ಚಿನ್ನಸಮುದ್ರ ಶೇಖರ ನಾಯ್ಕ ಮಾತನಾಡುವ ವೇಳೆ ಪೊಲೀಸ್ ಅಧಿಕಾರಿ, ಸಿಬ್ಬಂದಿ ಮಧ್ಯ ಪ್ರವೇಶಿಸಿದರು.


ಈ ಹಂತದಲ್ಲಿ ಶೇಖರ ನಾಯ್ಕ, ಪೊಲೀಸ್ ಅಧಿಕಾರಿ, ಸಿಬ್ಬಂದಿ ಮಧ್ಯೆ ಮಾತಿನ ಚಕಮಕಿ ನಡೆಸಿ, ಶೇಖರನಾಯ್ಕರನ್ನು ಬಂಧಿಸಲು ಪೊಲೀಸರು ಮುಂದಾದರು. ಆಗ ರೈತ ಸಂಘ-ಹಸಿರು ಸೇನೆ ಮುಖಂಡರು, ಪ್ರತಿಭಟನಾನಿರತ ಗ್ರಾಮಸ್ಥರು ತೀವ್ರ ವಿರೋಧ ವ್ಯಕ್ತಪಡಿಸಿದರಲ್ಲದೇ, ಹೆದ್ದಾರಿ ತಡೆಗೆ ಮುಂದಾದರು. ಜಿಲ್ಲಾಧಿಕಾರಿಗಳೇ ಸ್ಥಳಕ್ಕೆ ಬಂದು ನಮ್ಮ ಬೇಡಿಕೆ ಬಗ್ಗೆ ಲಿಖಿತ ಭರವಸೆ ನೀಡಲಿ ಎಂಬುದಾಗಿ ಪ್ರತಿಭಟನಾಕಾರರು ಪಟ್ಟು ಹಿಡಿದರು.

ಕೊನೆಗೆ ಪ್ರತಿಭಟನಾ ಸ್ಥಳಕ್ಕಾಗಮಿಸಿದ ಜಿಲ್ಲಾಧಿಕಾರಿ ಮಹಾಂತೇಶ ಜಿ. ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಪ್ರತಿಭಟನಾಕಾರರ ಮನವೊಲಿಸಿ ದರು. ಜಿಲ್ಲಾಧಿಕಾರಿಗಳು ಮಾತನಾಡಿ, ನಿಮ್ಮ ಬೇಡಿಕೆ ಬಗ್ಗೆ ಸಿಎಂ ಗಮನಕ್ಕೆ ತಂದಿದ್ದು, ನಿಮ್ಮ ಬೇಡಿಕೆ ಈಡೇರಿಸುವ ಬಗ್ಗೆ ಸಂಜೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಿಮ್ಮ ಜೊತೆಗೆ ಚರ್ಚಿಸಿ, ಲಿಖಿತ ಭರವಸೆ ನೀಡುತ್ತೇನೆ. ನಿಮ್ಮ ಬೇಡಿಕೆ ಈಡೇರಿಸುವವರೆಗೂ ನಾನು ದಾವಣಗೆರೆ ಬಿಟ್ಟು ಹೋಗುವುದಿಲ್ಲ ಎಂಬುದಾಗಿ ಆಶ್ವಾಸನೆ ನೀಡಿದ ನಂತರವಷ್ಟೇ, ಪ್ರತಿಭಟನಾಕಾರರು ಹೋರಾಟವನ್ನು ಹಿಂಪಡೆದರು.

ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ತಾಲ್ಲೂಕಿನ ಮಲ್ಲಶೆಟ್ಟಿಹಳ್ಳಿ ಬಳಿ ಹೆದ್ದಾರಿ ದುರಸ್ತಿಪಡಿಸುವಂತೆ, ಇಲ್ಲಿ ಹೆದ್ದಾರಿ ಎರಡೂ ಬದಿಗೆ ಬಂದು ಹೋಗಲು ಕೆಳ ಸೇತುವೆ ನಿರ್ಮಿಸುವಂತೆ ಮನವಿ ಮಾಡುತ್ತಲೇ ಬಂದಿದ್ದೇವೆ. ಆದರೆ, ಅವೈಜ್ಞಾನಿಕ ಸೇತುವೆ ಇದ್ದು, ಇದರಲ್ಲಿ ಎತ್ತಿನ ಬಂಡಿ ಹುಲ್ಲು ತುಂಬಿದರೆ ಹೋಗದ ಸ್ಥಿತಿ ಇದೆ. ವಿನಾಕಾರಣ ನಾವು ಗ್ರಾಮಸ್ಥರು ನಾಲ್ಕು ಕಿ.ಮೀ. ಸುತ್ತು ಹಾಕಿಕೊಂಡು ಬರಬೇಕಾದ ಸ್ಥಿತಿ ಇದೆ. ಕೇವಲ 50-60 ಹೆಜ್ಜೆ ಹಾಕುವ ಕಡೆ ನಾಲ್ಕು ಕಿ.ಮೀ. ಸುತ್ತಾಡಬೇಕೇ. ನಿರಂತರ ಹೋರಾಟ ನಡೆಸಿಕೊಂಡು ಬಂದಿದ್ದರೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವಾಗಲೀ, ಜಿಲ್ಲಾಡಳಿತವಾಗಲೀ, ಸಂಸದರು, ಸಚಿವರು, ಶಾಸಕರಾಗಲೀ ನಮ್ಮ ಸಮಸ್ಯೆಗೆ ಸ್ಪಂದಿಸಿಲ್ಲ. ಹಿಂದಿನಿಂದಲೂ ಜಿಲ್ಲಾಡಳಿತ ಆದಷ್ಟು ಬೇಗನೆ ಕಾಮಗಾರಿ ಆರಂಭಿಸುವುದಾಗಿ ಹೇಳಿದ್ದರೂ, ಈವರೆಗೂ ಅದನ್ನು ಕಾರ್ಯ ರೂಪಕ್ಕೆ ತಂದಿಲ್ಲ ಎಂದು ಮಲ್ಲಶೆಟ್ಟಿಹಳ್ಳಿ ಚನ್ನಬಸಪ್ಪ ಅಸಮಾಧಾನ ವ್ಯಕ್ತಪಡಿಸಿದರು.


ಪ್ರತಿಭಟನೆಯಲ್ಲಿ ಸಂಘದ ಕರಿಲಕ್ಕೇನಹಳ್ಳಿ ಹನುಮಂತಪ್ಪ, ಈಚಘಟ್ಟದ ಕರಿಬಸಪ್ಪ, ಮಲ್ಲಶೆಟ್ಟಿಹಳ್ಳಿ ಹನುಮೇಶ, ಬುಳ್ಳಾಪುರ ಹನುಮಂತಪ್ಪ, ಭರಮಪ್ಪ ಮಾಸಡಿ, ದಾಗಿನಕಟ್ಟೆ ಬಸವರಾಜ, ತಿಮ್ಮೇಶ, ಬುಳ್ಳಾಪುರ ಹನುಮಂತಪ್ಪ, ಪರಮೇಶ್ವರಪ್ಪ, ಖಲೀಮುಲ್ಲಾ, ನಾಗರಾಜ ಸೇರಿದಂತೆ ಇತರರು ಪಾಲ್ಗೊಂಡಿದ್ದರು.


### ಹೊಸಬಿಸಲೇರಿ ಸಣ್ಣ ರುದ್ರಗೌಡ್ರು ನಿಧನ



ದಾವಣಗೆರೆ ತಾಲ್ಲೂಕು ಹೊಸ ಬಿಸಲೇರಿ ಗ್ರಾಮದ ವಾಸಿ ಸಣ್ಣ ರುದ್ರಗೌಡ್ರು (85) ಅವರು ದಿನಾಂಕ 22.10.2021ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ನಿಧನರಾದರು. ಓರ್ವ ಪುತ್ರ, ನಾಲ್ವರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 23.10.2021ರ ಶನಿವಾರ ಬೆಳಗ್ಗೆ 11 ಗಂಟೆಗೆ ಸ್ವಗ್ರಾಮ ದಾವಣಗೆರೆ ತಾಲ್ಲೂಕು ಹೊಸಬಿಸಲೇರಿಯಲ್ಲಿ ನೆರವೇರಲಿದೆ.

### ಯರಗುಂಟೆ ಬೂದಿಹಾಳ್ ವೀರಪ್ಪ ನಿಧನ



ದಾವಣಗೆರೆ ತಾಲ್ಲೂಕು ಯರಗುಂಟೆ ಗ್ರಾಮದ ಬೂದಿಹಾಳ್ ವೀರಪ್ಪ (96) ಅವರು ದಿನಾಂಕ 22.10.2021ರ ಶುಕ್ರವಾರ ಸಂಜೆ 6.15ಕ್ಕೆ ನಿಧನರಾದರು. ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 23.10.2021ರ ಶನಿವಾರ ಮಧ್ಯಾಹ್ನ 12.30 ಕ್ಕೆ ಯರಗುಂಟೆ ಗ್ರಾಮದ ಮೃತರ ತೋಟದಲ್ಲಿ ನೆರವೇರಲಿದೆ.


## ಹರಪನಹಳ್ಳಿ : ಲಸಿಕೆ ಹಾಕಿಸಿಕೊಳ್ಳಲು ಮನವೊಲಿಕೆ

ಹರಪನಹಳ್ಳಿ, ಅ.22- ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಸಾರ್ವಜನಿಕರ ಮನವೊಲಿಕೆ ನಡೆದಿದೆ ಎಂದು ತಹಶೀಲ್ದಾರ್ ಎಲ್ .ಎಂ.ನಂದೀಶ್ ತಿಳಿಸಿದ್ದಾರೆ.

ತಾಲ್ಲೂಕಿನ ಚಿಕ್ಕಳ್ಳಿ, ಕಾನಹಳ್ಳಿ, ಕಡಬಗೇರಿ, ಕನಕನಬಸಾಪುರ, ಅರಸಿಕೇರಿ, ಪಟ್ಟಣದ ವಿವಿಧೆಡೆ ಗುರುವಾರ ಸಂಚರಿಸಿ ಕೋವಿಡ್ ಲಸಿಕೆ ಹಾಕುವ ಕಾರ್ಯಕ್ರಮ ವೀಕ್ಷಿಸಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಅನೇಕರು ಈಗಲೂ ಸಹ ಲಸಿಕೆ ಹಾಕಿಸಿಕೊಳ್ಳಲು ಮುಂದೆ ಬರುತ್ತಾ ಇಲ್ಲ, ನಾವು ಮನವೊಲಿಸಿ ಹಾಕಿಸುತ್ತಿದ್ದೇವೆ ಎಂದು ಹೇಳಿದರು. ಲಸಿಕೆ ಹಾಕಿಸಿಕೊಳ್ಳುವುದರಿಂದ ಕೋವಿಡ್ ಬರುವುದಿಲ್ಲ, ಬಂದರೂ ಯಾವುದೇ ಅಪಾಯವಾಗುವುದಿಲ್ಲ, ಆದ್ದರಿಂದ ತಪ್ಪದೇ ಎಲ್ಲರೂ ಕೋವಿಡ್ ಲಸಿಕೆ ಹಾಕಿಸಿಕೊಳ್ಳಬೇಕು ಎಂದು ಅವರು ಮನವಿ ಮಾಡಿದರು.

ತಾಲ್ಲೂಕು ಆರೋಗ್ಯಾಧಿಕಾರಿ ದೇವರಾಜ ಮಾಹಿತಿ ನೀಡಿ, ಪಟ್ಟಣದಲ್ಲಿ 10 ಕಡೆ, ಗ್ರಾಮೀಣ ಭಾಗದಲ್ಲಿ 70 ಕಡೆ ಒಟ್ಟು ತಾಲ್ಲೂಕಿನಲ್ಲಿ 80 ಕಡೆ ಶುಕ್ರವಾರ ಕೋವಿಡ್ ಲಸಿಕೆ ಹಾಕುವ ಕಾರ್ಯಕ್ರಮ ನಡೆದಿದೆ ಎಂದರು.

ಬೆಳಿಗ್ಗೆ ಗ್ರಾಮದ ನಿಗದಿತ ಜಾಗದಲ್ಲಿ ಲಸಿಕೆ ಹಾಕಲಾಗುವುದು, ಸಂಜೆ ನಮ್ಮ ಸಿಬ್ಬಂದಿ ಮನೆ ಮನೆಗೆ ತೆರಳಿ ಲಸಿಕೆ ಹಾಕುತ್ತಾರೆ ಎಂದು ಹೇಳಿದರು. ಈಗಾಗಲೇ ಮೊದಲನೆ ಡೋಸ್ ಶೇ.80 ರಷ್ಟು ಹಾಕುವುದು ಆಗಿದೆ.ಆದರೆ ಈಗ ಜನರು ಲಸಿಕೆಗೆ ಅಷ್ಟೊಂದು ಪ್ರಾಮುಖ್ಯತೆ ಕೊಡುತ್ತಾ ಇಲ್ಲ, ಆದರೂ ನಾವು ಪ್ರಯತ್ನ ಮುಂದುವರೆಸಿದ್ದೇವೆ ಎಂದು ಹೇಳಿದರು. ಶುಕ್ರವಾರ ಒಂದೇ ದಿನ 14 ಸಾವಿರ ಡೋಸ್ ಲಸಿಕೆ ಹಾಕುವ ಗುರಿ ಇದ್ದರೂ ಮಧ್ಯಾಹ್ನದ 3.30 ರ ವರೆಗೆ 3155 ಜನರಿಗೆ ಲಸಿಕೆ ಹಾಕಲಾಗಿತ್ತು ಎಂದು ಅವರು ತಿಳಿಸಿದರು.

ತಹಶೀಲ್ದಾರ್ ಎಲ್.ಎಂ.ನಂದೀಶ್ ಜೊತೆ ಕಂದಾಯ ಅಧಿಕಾರಿ ಅರವಿಂದ್, ಪಿಡಿಒಗಳು, ಗ್ರಾಮ ಲೆಕ್ಕಿಗರು ಹಾಗು ಇತರರು ಇದ್ದರು.

SINCE 1962 DAVANAGERE URBAN CO-OPERATIVE BANK LTD.

# ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಪ್ರಧಾನ ಕಚೇರಿ : ಅಂಚೆ ಪೆಟ್ಟಿಗೆ ಸಂಖ್ಯೆ 217, ಗಾಂಧಿ ಸರ್ಕಲ್ ಹತ್ತಿರ, ಪಿ.ಬಿ. ರಸ್ತೆ, ದಾವಣಗೆರೆ - 577 002. ಫೋ. : 272540, 272541

## ದಿನಾಂಕ 31.03.2021ಕ್ಕೆ ಇದ್ದಂತೆ ಲಾಭ-ಹಾನಿ ಪತ್ರಿಕೆ

| 31-03-2020 ರೂ. ಪೈ. | ಖರ್ಚು | 31-03-2021 ರೂ. ಪೈ. | 31-03-2020 ರೂ. ಪೈ. | ಆದಾಯ | 31-03-2021 ರೂ. ಪೈ. |
|---|---|---|---|---|---|
| 23,17,43,788-97 | ಠೇವಣಿಗಳ ಮತ್ತು ತಂದ ಸಾಲಗಳ ಮೇಲೆ ಕೊಟ್ಟ ಬಡ್ಡಿ | 26,37,55,999-88 | 27,83,27,537-78 | ಸಾಲ ಮತ್ತು ಮುಂಗಡಗಳ ಮೇಲೆ ಬಂದ ಬಡ್ಡಿ | 29,06,56,528-56 |
| 4,29,89,143-00 | ಸಂಬಳ, ಭತ್ಯೆ, ಭವಿಷ್ಯ ನಿಧಿ ಮತ್ತು ಇತರೆ | 3,94,59,673-00 | 10,51,20,433-77 | ವಿನಿಯೋಗಗಳ ಮೇಲೆ ಬಂದ ಆದಾಯ | 12,82,27,859-88 |
| 2,87,000-00 | ಆಡಳಿತ ಮಂಡಳಿಯ ಸದಸ್ಯರುಗಳ ಭತ್ಯೆ | 2,71,000-00 | 51,29,398-27 | ಇತರೆ ಜಮಾಗಳು | 80,93,310-36 |
| 59,90,760-25 | ಬಾಡಿಗೆ, ತೆರಿಗೆಗಳು, ವಿಮೆ ಮತ್ತು ವಿದ್ಯುಚ್ಛಕ್ತಿ ಖರ್ಚುಗಳು | 70,86,393-93 | | | |
| 1,60,000-00 | ಕಾನೂನು ಖರ್ಚುಗಳು | 3,85,000-00 | | | |
| 1,25,409-32 | ಅಂಚೆ, ತಂತಿ ಮತ್ತು ದೂರವಾಣಿ ಖರ್ಚು | 1,62,958-97 | | | |
| 11,05,555-00 | ಲೆಕ್ಕ ಪರಿಶೋಧಕರ ಮತ್ತು ಮಾರಾಟಾಧಿಕಾರಿಗಳ ಸಂಬಳ | 12,90,078-00 | | | |
| 60,99,523-66 | ಆಸ್ತಿಗಳ ಮೇಲೆ ಸವಕಳಿ ಮತ್ತು ದುರಸ್ತಿ ಖರ್ಚು | 48,95,859-32 | | | |
| 4,68,448-56 | ಮುದ್ರಣ, ಲೇಖನ ಸಾಮಗ್ರಿಗಳು ಮತ್ತು ಜಾಹೀರಾತು | 6,67,284-09 | | | |
| 38,82,998-00 | ಲಕ್ಷ್ಮಿ ಠೇವಣಿ ಸಂಗ್ರಹಕಾರರ ಕಮೀಷನ್ | 37,94,860-00 | | | |
| 8,22,789-00 | ವಾರ್ಷಿಕ ಮಹಾಸಭೆಯ ಖರ್ಚು | 5,35,627-00 | | | |
| 54,44,868-19 | ಇತರೆ ಖರ್ಚುಗಳು | 49,34,236-54 | | | |
| 0.00 | ಮುಂಗಡ ಆದಾಯ ತೆರಿಗೆ ಮತ್ತು ಮೂಲದಲ್ಲಿ ತೆರಿಗೆಗೆ ಅವಕಾಶ ಕಲ್ಪಿಸಿದ್ದು | 57,06,250-27 | | | |
| 0.00 | ಆದಾಯ ತೆರಿಗೆ ಪಾವತಿಸಿದ್ದು | 20,86,290-00 | | | |
| **8,94,57,085-87** | **ಲಾಭ (ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳಿಗೆ ವಜಾ ಮಾಡುವ ಮೊದಲು)** | **9,19,46,187-80** | | | |
| **38,85,77,369-82** | **ಜುಮ್ಲಾ** | **42,69,77,698-80** | **38,85,77,369-82** | **ಜುಮ್ಲಾ** | **42,69,77,698-80** |
| | **ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳು** | | **8,94,57,085-87** | ಲಾಭ ಮೇಲಿನಂತೆ ಬಂದಂತೆ | **9,19,46,187-80** |
| | 1) ಆದಾಯ ತೆರಿಗೆಗೆ ಅವಕಾಶ | **1,90,00,000-00** | | | |
| | 2) ಕರಡು ಸಾಲದ ನಿಧಿಗೆ ಅವಕಾಶ [ಆದಾಯ ತೆರಿಗೆ ಸೆ. 36 (1)(Viia)] | **75,00,000-00** | | | |
| | 3) ದೀರ್ಘಾವಧಿ ಸಾಲದ ಮೇಲೆ ಬಂದಂತಹ ಆದಾಯದ ಮೇಲೆ ಅವಕಾಶ [ಸೆ. 36(1)(Viii)] | **55,00,000-00** | | | |
| | 4) ಗುಂತಾಯಿಸಿದ ಹಣದ ಮೇಲೆ ಏರಿಳಿತ ನಿಧಿ | **31,00,000-00** | | | |
| | 5) ಆಡಿಟ್ ಫೀ ಪಾವತಿಯಾಗಬೇಕಾದದ್ದು | **3,50,000-00** | | | |
| | 6) ಸಿಬ್ಬಂದಿಗೆ ಎಕ್ಸ್‌ಗ್ರೇಷಿಯಾ ಅವಕಾಶ | **58,29,588-00** | | | |
| **4,51,66,462.00** | | **4,12,79,588-00** | | | |
| **4,42,90,623.87** | **ನಿವ್ವಳ ಲಾಭ** | **5,06,66,599-80** | | | |
| **8,94,57,085.87** | **ಜುಮ್ಲಾ** | **9,19,46,187-80** | **8,94,57,085-87** | **ಜುಮ್ಲಾ** | **9,19,46,187-80** |

## ದಿನಾಂಕ 31.03.2021ಕ್ಕೆ ಇದ್ದಂತೆ ಅಢಾವೆ ಪತ್ರಿಕೆ

| 31-03-2020 ರೂ. ಪೈ. | ಬಂಡವಾಳ ಮತ್ತು ಜವಾಬ್ದಾರಿಗಳು | | 31-03-2021 ರೂ. ಪೈ. |
|---|---|---|---|
| **10,70,25,200-00** | **ಷೇರು ಬಂಡವಾಳ** ವ್ಯಕ್ತಿಗತ ಮತ್ತು ಪಾಲುದಾರಿಕೆ ಸಂಸ್ಥೆಗಳಿಂದ ರೂ.100 ಮೌಲ್ಯದ 1127671 ಷೇರುಗಳು | | **11,27,67,100-00** |
| **47,65,27,685-78** | **ಆಪದ್ಧನ ಮತ್ತು ಇತರೆ ನಿಧಿಗಳು** | | **52,91,83,708-65** |
| **45,98,76,452-80** | | **51,15,95,025-67** | |
| 21,44,99,041-80 | ಆಪದ್ಧನ ನಿಧಿ | 25,26,17,614-67 | |
| 4,50,00,000-00 | ಕಟ್ಟಡ ನಿಧಿ | 4,60,00,000-00 | |
| 50,00,000-00 | ಲಾಭಾಂಶ ಸಮನ್ವಯ ನಿಧಿ | 50,00,000-00 | |
| 8,10,00,000-00 | ಕರಡು ಸಾಲದ ನಿಧಿ | 8,20,00,000-00 | |
| 5,03,77,411-00 | ಕರಡು ಸಾಲದ ನಿಧಿ [ಆದಾಯ ತೆರಿಗೆ ಸೆ. 36 (1)(viia)] | 5,78,77,411-00 | |
| 3,60,00,000-00 | ಗುಂತಾಯಿಸಿದ ಹಣದ ಮೇಲೆ ಸವಕಳಿ ನಿಧಿ | 3,65,00,000-00 | |
| 1,75,00,000-00 | ಗುಂತಾಯಿಸಿದ ಹಣದ ಮೇಲೆ ಏರಿಳಿತ ನಿಧಿ | 2,11,00,000-00 | |
| 1,05,00,000-00 | ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಬಾಧ್ಯತೆ ನಿಧಿ | 1,05,00,000-00 | |
| **1,66,51,232-98** | **ಇತರೆ ನಿಧಿಗಳು ಮತ್ತು ಕಾಯ್ದಿರಿಸಿದ ನಿಧಿಗಳು** | **1,75,88,682-98** | |
| 1,28,71,929-75 | ಸಿಬ್ಬಂದಿ ಸೌಕರ್ಯ ನಿಧಿ | 1,37,67,879-75 | |
| 14,65,000-00 | ಸಾರ್ವಜನಿಕ ಒಳಿತು ನಿಧಿ | 16,91,000-00 | |
| 61,303-23 | ಧರ್ಮನಿಧಿ | 1,81,803-23 | |
| 13,53,000-00 | ಸದಸ್ಯರ ಮರಣೋತ್ತರ ಪರಿಹಾರ ನಿಧಿ | 9,48,000-00 | |
| 9,00,000-00 | ಜುಬಿಲೀ ನಿಧಿ | 10,00,000-00 | |
| **376,78,14,046-58** | **ಠೇವಣಿಗಳು ಮತ್ತು ಇತರೆ ಖಾತೆಗಳು** | | **434,52,96,943-35** |
| **297,18,05,917-25** | **ಖಾಯಂ ಠೇವಣಿಗಳು** | **344,25,23,271-25** | |
| 275,39,18,629-25 | ವ್ಯಕ್ತಿಗಳಿಂದ | 341,25,27,611-25 | |
| 21,78,87,288-00 | ಇತರೆ ಸಂಸ್ಥೆಗಳಿಂದ | 2,99,95,660-00 | |
| **59,50,25,401-30** | **ಉಳಿತಾಯ ಠೇವಣಿಗಳು** | **65,93,14,127-38** | |
| 59,46,76,284-10 | ವ್ಯಕ್ತಿಗಳಿಂದ | 65,85,85,347-18 | |
| 3,49,117-20 | ಇತರೆ ಸಂಸ್ಥೆಗಳಿಂದ | 7,28,780-20 | |
| **19,97,70,850-88** | **ಚಾಲ್ತಿ ಠೇವಣಿಗಳು** | **24,26,79,575-77** | |
| 19,93,41,840-12 | ವ್ಯಕ್ತಿಗಳಿಂದ | 24,19,34,065-31 | |
| 4,29,010-76 | ಇತರೆ ಸಂಘಗಳಿಂದ | 7,45,510-46 | |
| **12,11,877-15** | **ಇತರೆ ಠೇವಣಿಗಳು** | **7,79,968-95** | |
| 12,11,877-15 | ವಾಯಿದೆ ಮೀರಿದ ಠೇವಣಿ | 7,79,968-95 | |
| 0-00 | **ಪಡೆದ ಸಾಲಗಳು** | | 0-00 |
| -- | ಅಲ್ಪಾವಧಿ ಸಾಲಗಳು | -- | |
| -- | ಮಧ್ಯಮಾವಧಿ ಸಾಲಗಳು | -- | |
| **0-00** | **ವಸೂಲಾಗತಕ್ಕ ಮತ್ತು ವಸೂಲಿಗೆ ಬಂದಿರುವ ಬಿಲ್ಲುಗಳು** | | **0-00** |
| **0-00** | **ಶಾಖೆಗಳ ಹೊಂದಾಣಿಕೆ** | | **0-00** |
| **6,32,87,148-89** | **ಕಟ್ಟುಬಾಕಿ ಬಡ್ಡಿ ಮೀಸಲು** | | **6,32,53,733-98** |
| **22,97,639-89** | **ಕೊಡಬೇಕಾದ ಬಡ್ಡಿ** | | **27,12,444-27** |
| **4,44,99,468-28** | **ಇತರೆ ಜವಾಬ್ದಾರಿಗಳು** | | **4,86,76,066-93** |
| 13,70,299-92 | ಪಾವತಿಯಾಗಬೇಕಾಗಿದ್ದ ಹುಂಡಿಗಳು | 10,97,924-68 | |
| 21,39,503-00 | ಪಡೆಯದಿರುವ ಲಾಭಾಂಶ | 13,79,278-00 | |
| 15,35,023-02 | ಸಂಡ್ರಿ ಬಾಬ್ತುಗಳು | 14,56,870-31 | |
| 3,54,000-00 | ಆಡಿಟ್ ಫೀ ಪಾವತಿಯಾಗಬೇಕಾದದ್ದು | 3,57,000-00 | |
| 22,30,019-00 | ಆದಾಯ ತೆರಿಗೆ ಅವಕಾಶ | 22,30,019-00 | |
| 53,16,462-00 | ಸಿಬ್ಬಂದಿಗೆ ಎಕ್ಸ್‌ಗ್ರೇಷಿಯಾ ಅವಕಾಶ | 58,29,588-00 | |
| 2,34,17,000-00 | ದೀರ್ಘಾವಧಿ ಸಾಲದ ಮೇಲೆ ಬಂದಂತಹ ಆದಾಯದ ಮೇಲೆ ಅವಕಾಶ | 2,89,17,000-00 | |
| 3,632-70 | ಬಿಲ್ಸ್ ಫಾರ್ ಕಲೆಕ್ಷನ್ | 3,632-70 | |
| 26,58,693-60 | ಟಿ.ಡಿ.ಎಸ್. ಪೇಯಬಲ್ | 26,94,748-20 | |
| 4,74,835-04 | ಸರಕು ಸೇವಾ ತೆರಿಗೆ | 6,903-04 | |
| 50,00,000-00 | ಸಿಬ್ಬಂದಿಗಳ ನಿವೃತ್ತಿ ಸಮಯದ ಗಳಿಕೆ ರಜೆ ನಗದೀಕರಣದ ಅವಕಾಶ | 47,03,103-00 | |
| **4,42,90,623-87** | **ಲಾಭ-ನಷ್ಟ ಖಾತೆ** | | **5,06,66,599-80** |
| | ಕಳೆದ ವರ್ಷದ ಅಢಾವೆ ಪತ್ರಿಕೆ ಲಾಭ | 4,42,90,623-87 | |
| | ವಿನಿಯೋಗಿಸಿದ್ದು | 4,42,90,623-87 | |
| | **ಈ ಸಾಲಿನ ನಿವ್ವಳ ಲಾಭ** | **5,06,66,599-80** | |
| | **ಷರಾ : ಈ ಸಾಲಿನಲ್ಲಿ ಗಳಿಸಿದ ಲಾಭ** | **9,19,46,187-80** | |
| | **ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳು** | | |
| | 1. ಆದಾಯ ತೆರಿಗೆ ಅವಕಾಶ | 1,90,00,000-00 | |
| | 2. ಕರಡು ಸಾಲದ ನಿಧಿಗೆ ಅವಕಾಶ [ಆದಾಯ ತೆರಿಗೆ ಸೆ. 36 (1)(viia)] | 75,00,000-00 | |
| | 3. ದೀರ್ಘಾವಧಿ ಸಾಲದ ಮೇಲೆ ಬಂದಂತಹ ಆದಾಯದ ಮೇಲೆ ಅವಕಾಶ [ ಸೆ. 36 (1)(viii)] | 55,00,000-00 | |
| | 4. ಸಿಬ್ಬಂದಿಗೆ ಎಕ್ಸ್‌ಗ್ರೇಷಿಯಾ ಅವಕಾಶ | 58,29,588-00 | |
| | 5. ಗುಂತಾಯಿಸಿದ ಹಣದ ಮೇಲೆ ಏರಿಳಿತ ನಿಧಿ | 31,00,000-00 | |
| | 6. ಆಡಿಟ್ ಫೀ ಪಾವತಿಯಾಗಬೇಕಾದದ್ದು | 3,50,000-00 | |
| | | **4,12,79,588-00** | |
| | **ನಿವ್ವಳ ಲಾಭ** | **5,06,66,599-80** | |
| **450,57,41,813-29** | **ಜುಮ್ಲಾ** | | **515,25,56,596-98** |
| **87,61,767-99** | **ಘಟನಾಪೇಕ್ಷ ಬಾಧ್ಯತೆಗಳು** ಸ್ವೀಕಾರ ಸಮ್ಮತಿ ಲೇಖ ಮತ್ತು ಇತರೆ ಜವಾಬ್ದಾರಿಗಳು | | **5,02,78,664-00** |
| 87,61,767-99 | ಆಧಾರ ಸಹಿತ | 5,02,78,664-00 | |
| 0-00 | ಆಧಾರ ರಹಿತ | 0-00 | |

| 31-03-2020 ರೂ. ಪೈ. | ಸ್ವತ್ತು ಮತ್ತು ಆಸ್ತಿ | | 31-03-2021 ರೂ. ಪೈ. |
|---|---|---|---|
| **27,03,48,980-85** | **ನಗದು ಮತ್ತು ಇತರೆ ಬ್ಯಾಂಕಿನಲ್ಲಿರುವ ಶಿಲ್ಕು** | | **30,83,00,835-71** |
| 3,26,23,549-00 | ಬ್ಯಾಂಕಿನಲ್ಲಿರುವ ನಗದು | 3,58,20,760-00 | |
| | ಎಸ್.ಬಿ.ಐ. ಮತ್ತು ಇತರೆ ಸಮವರ್ತಿ ಬ್ಯಾಂಕುಗಳಲ್ಲಿ ಹಾಗೂ ಕೆ.ಎಸ್.ಸಿ. ಅಪೆಕ್ಸ್ ಬ್ಯಾಂಕ್, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಲ್ಲಿ | | |
| 6,02,82,227-85 | ಚಾಲ್ತಿ ಖಾತೆ | 6,00,36,871-71 | |
| 17,74,43,204-00 | ಖಾಯಂ ಠೇವಣಿ | 21,24,43,204-00 | |
| **55,45,34,780-77** | **ಇತರೆ ಬ್ಯಾಂಕಿನಲ್ಲಿ ಶಿಲ್ಕು** | | **71,81,62,969-74** |
| 22,45,39,780-77 | ಚಾಲ್ತಿ ಖಾತೆ | 13,91,63,169-74 | |
| 32,99,95,000-00 | ಖಾಯಂ ಠೇವಣಿ | 57,89,99,800-00 | |
| 0-00 | ಕಾಲ್‌ಮನಿ ಹೂಡಿಕೆ | | 0-00 |
| **95,12,47,555-00** | **ಸಂಚಯಗಳು** | | **129,86,95,814-00** |
| **68,10,45,055-00** | ಕೇಂದ್ರ/ರಾಜ್ಯ ಸರ್ಕಾರದ ಭದ್ರತಾ ಪತ್ರಗಳು | **97,84,93,314-00** | |
| 68,10,45,055-00 | ಪುಸ್ತಕ ಬೆಲೆ | 97,84,93,314-00 | |
| 68,00,00,000-00 | ಮುಖಬೆಲೆ | 97,00,00,000-00 | |
| 69,30,72,000-00 | ಮಾರುಕಟ್ಟೆ ಬೆಲೆ | 98,43,92,000-00 | |
| **2,02,500-00** | ಸಹಕಾರಿ ಸಂಘಗಳ ಷೇರುಗಳು | **2,02,500-00** | |
| **27,00,00,000-00** | ಇತರೆ | **32,00,00,000-00** | |
| **260,24,47,665-48** | **ಸಾಲ ಮತ್ತು ಮುಂಗಡಗಳು** | | **268,82,51,653-58** |
| **127,29,29,750-81** | **ಅಲ್ಪಾವಧಿ ಸಾಲಗಳು ರೋಖ ಪತ್ರಗಳು ಓವರ್ ಡ್ರಾಫ್ಟ್‌ಗಳು** | **128,18,24,923-64** | |
| 126,15,65,750-81 | ಬಿಲ್ಲುಗಳು ಸೋಡಿ ಅವುಗಳಲ್ಲಿ ವಾಸ್ತವಿಕ ಭದ್ರತೆಗಳ ಮೇಲೆ | 127,51,23,221-06 | |
| 127,29,29,750-81 | ಅವುಗಳಲ್ಲಿ ವ್ಯಕ್ತಿಗಳಿಂದ ಬರಬೇಕಾದ ಬಾಕಿ | 128,18,24,923-64 | |
| 6,72,61,709-00 | ಅವುಗಳಲ್ಲಿ ಸುಸ್ತಿಯಾದ ಬಾಕಿ | 4,93,97,383-00 | |
| **11,69,74,675-66** | **ಮಧ್ಯಮಾವಧಿ ಸಾಲಗಳು** | **11,87,46,790-64** | |
| 11,69,74,675-66 | ಅವುಗಳಲ್ಲಿ ಸ್ವತ್ತುಗಳ ಆಧಾರದ ಮೇಲೆ | 11,87,46,790-64 | |
| 11,69,74,675-66 | ಅವುಗಳಲ್ಲಿ ವ್ಯಕ್ತಿಗಳಿಂದ ಬರಬೇಕಾದ ಬಾಕಿ | 11,87,46,790-64 | |
| 1,01,88,208-00 | ಅವುಗಳಲ್ಲಿ ಸುಸ್ತಿಯಾದ ಬಾಕಿ | 91,04,252-00 | |
| **121,25,43,239-01** | **ದೀರ್ಘಾವಧಿ ಸಾಲಗಳು** | **128,76,79,939-30** | |
| 121,25,43,239-01 | ಅವುಗಳಲ್ಲಿ ಸ್ವತ್ತುಗಳ ಆಧಾರದ ಮೇಲೆ | 128,76,79,939-30 | |
| 121,25,43,239-01 | ಅವುಗಳಲ್ಲಿ ವ್ಯಕ್ತಿಗಳಿಂದ ಬರಬೇಕಾದ ಬಾಕಿ | 128,76,79,939-30 | |
| 90,91,681-00 | ಅವುಗಳಲ್ಲಿ ಸುಸ್ತಿಯಾದ ಬಾಕಿ | 1,09,85,035-00 | |
| **0-00** | **ವಸೂಲಾಗತಕ್ಕ ಮತ್ತು ವಸೂಲಿಗೆ ಕಳಿಸಿರುವ ಬಿಲ್ಲುಗಳು** | | **0-00** |
| **1,55,13,400-00** | ಕಟ್ಟಡಗಳು (ಸವಕಳಿ ತೆಗೆದು) | | **1,40,27,800-00** |
| **73,19,300-00** | ಪೀಠೋಪಕರಣಗಳು ಮತ್ತು ಮುಟ್ಟುಗಳು | | **67,83,390-62** |
| **6,32,87,148-89** | ಬರಬೇಕಾದ ಬಡ್ಡಿ | | **6,32,53,733-98** |
| **18,775-00** | ಶಾಖೆಗಳ ಹೊಂದಾಣಿಕೆ | | **37,325-00** |
| **4,10,24,207-30** | **ಇತರೆ ಆಸ್ತಿಗಳು** | | **5,50,43,074-35** |
| 17,46,000-00 | ಗಣಕ ಯಂತ್ರಗಳು (ಕಂಪ್ಯೂಟರ್) | 21,55,400-00 | |
| 1,64,002-00 | ಮುಂಗಡ ಖಾತೆ | 3,30,422-00 | |
| 1,8,837-50 | ದೂರವಾಣಿ ಖಾತೆ | 18,649-49 | |
| 5,40,156-00 | ಆದಾಯ ತೆರಿಗೆ (ಟಿ.ಡಿ.ಎಸ್.) | 0-00 | |
| 2,83,21,309-00 | ತೊಡಗಣೆ ಮೇಲೆ ಬರಬೇಕಾದ ಬಡ್ಡಿ | 4,85,83,264-00 | |
| 1,07,528-00 | ಜೆರಾಕ್ಸ್ ಯಂತ್ರ | 90,000-00 | |
| 26,06,246-80 | ಮುದ್ರಣ ಮತ್ತು ಲೇಖನ ಸಾಮಗ್ರಿಗಳ ದಾಸ್ತಾನು | 21,11,300-00 | |
| 1,68,680-00 | ಕೆ.ಇ.ಬಿ. ಠೇವಣಿ | 1,68,680-00 | |
| 51,84,740-00 | ಮುಂಗಡ ಆದಾಯ ತೆರಿಗೆ | 0-00 | |
| 15,16,200-00 | ಯಂತ್ರೋಪಕರಣ | 12,87,900-00 | |
| 50,508-00 | ಇ-ಸ್ಟ್ಯಾಂಪ್ ಠೇವಣಿ ಮತ್ತು ಮುಂಗಡ | 50,508-00 | |
| 6,00,000-00 | ಕಂಪ್ಯೂಟರ್ ತಂತ್ರಾಂಶ | 1,84,500-00 | |
| 0-00 | ಕೋವಿಡ್ 19 ಎಕ್ಸ್‌ಗ್ರೇಷಿಯಾ ಬರಬೇಕಾದದ್ದು | 62,450-86 | |
| **450,57,41,813-29** | **ಜುಮ್ಲಾ** | | **515,25,56,596-98** |
| **87,61,767-99** | **ಸಾದಿಲ್ವಾರು ಜವಾಬ್ದಾರಿ** ಸಂಘಟಕ ಜವಾಬ್ದಾರಿ ಸ್ವೀಕೃತ ಮತ್ತು ಇತರೆ ಬಾಧ್ಯತೆ | | **5,02,78,664-00** |
| 87,61,767-99 | ಆಧಾರ ಸಹಿತ | 5,02,78,664-00 | |
| 0-00 | ಆಧಾರ ರಹಿತ | 0-00 | |

## ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯಂತೆ ಆಸ್ತಿ-ಜವಾಬ್ದಾರಿ ತಃಖ್ತೆಗಳಿಗೆ ತೋರಿಸಿದ ಅಂಶಗಳ ಬಗ್ಗೆ ಟಿಪ್ಪಣಿಗಳು :

1) ದಿನಾಂಕ **31.03.2021**ಕ್ಕೆ ಬ್ಯಾಂಕಿನ ಸಿ.ಆರ್.ಎ.ಆರ್. (Capital to Risk weighted Asset Ratio) ಪ್ರಮಾಣವು ಶೇಕಡ **15.84**ರಷ್ಟು ಇರುವುದು.

2) ತೊಡಗಣೆಗಳ ಮುಖಬೆಲೆ, ಪುಸ್ತಕ ಬೆಲೆ ಮತ್ತು ಮಾರುಕಟ್ಟೆ ಬೆಲೆಗಳನ್ನು ಅಢಾವೆ ಪತ್ರಿಕೆಯಲ್ಲಿ ನಮೂದಿಸಿದೆ.

3) (ಅ) ರಿಯಲ್ ಎಸ್ಟೇಟ್ ಮತ್ತು ಕನ್‌ಸ್ಟ್ರಕ್ಷನ್‌ರವರಿಗೆ ಈ ಸಾಲಿನಲ್ಲಿ ಸಾಲವನ್ನು ಕೊಟ್ಟಿರುವುದಿಲ್ಲ.
(ಆ) ಗೃಹ ನಿರ್ಮಾಣ/ಖರೀದಿ/ನವೀಕರಣ ಮುಂತಾದ ಉದ್ದೇಶಗಳಿಗೆ ಕೊಟ್ಟ ಸಾಲವು ರೂ.**1088.93** ಲಕ್ಷ ಇರುತ್ತದೆ.

4) ಷೇರು, ಡಿಬೆಂಚರುಗಳ ಮೇಲೆ ಸಾಲವನ್ನು ಕೊಟ್ಟಿರುವುದಿಲ್ಲ. 5) (ಅ) ಬ್ಯಾಂಕಿನ ನಿರ್ದೇಶಕ ಮಂಡಳಿಯ ಸದಸ್ಯರಿಗೆ ಮತ್ತು ಅವರ ಹತ್ತಿರದ ಸಂಬಂಧಿಗಳಿಗೆ (ಠೇವಣಿಗಳ) ಭದ್ರತಾ ಆಧಾರದ ಮೇಲೆ ನೀಡಿರುವ ಸಾಲದ ಒಟ್ಟು ಮೊತ್ತವು ದಿನಾಂಕ: **31.03.2021**ಕ್ಕೆ ರೂ.**704.49** ಲಕ್ಷ ಇರುತ್ತದೆ. (ಆ) ಈ ಸಾಲಿನಲ್ಲಿ ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ಯಾವುದೇ ಆಧಾರ ರಹಿತ ಬ್ಯಾಂಕ್ ಗ್ಯಾರಂಟಿ ಮತ್ತು ಖಾತರಿ ಪತ್ರಗಳನ್ನು ಕೊಟ್ಟಿರುವುದಿಲ್ಲ. 6) **2020-21**ನೇ ಸಾಲಿಗೆ ಬ್ಯಾಂಕಿನ ಠೇವಣಿಗಳ ಮೇಲೆ ಬಡ್ಡಿಯ ವೆಚ್ಚವು ಶೇಕಡಾ **6.46**ರಷ್ಟು ಇದೆ. 7) ಬ್ಯಾಂಕಿನ ಪ್ರಸಕ್ತ ಸಾಲಿನ ಅನುತ್ಪಾದಕ ಆಸ್ತಿಗಳು ಕೆಳಕಂಡಂತೆ ಇರುತ್ತದೆ.

(ರೂ. ಲಕ್ಷಗಳಲ್ಲಿ)

| ದಿನಾಂಕ | ಒಟ್ಟು ಅನುತ್ಪಾದಕ ಆಸ್ತಿಗಳು | | ನಿವ್ವಳ ಅನುತ್ಪಾದಕ ಆಸ್ತಿಗಳು | |
|---|---|---|---|---|
| | ಮೊಬಲಗು | ಶೇಕಡವಾರು | ಮೊಬಲಗು | ಶೇಕಡವಾರು |
| 31.03.2021 | 993.23 | 3.69% | -405.54 | 0.00% |
| 31.03.2020 | 691.83 | 2.66% | -621.94 | 0.00% |
| **ವ್ಯತ್ಯಾಸ** | **301.40** | **1.03%** | **-216.40** | **0.00%** |

8) **2020-21ನೇ ಸಾಲಿನಲ್ಲಿ ಬ್ಯಾಂಕಿನ ಲಾಭ ಗಳಿಕೆ ಈ ಕೆಳಕಂಡಂತಿದೆ.** * ಬ್ಯಾಂಕಿನ ಬಡ್ಡಿಯ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇಕಡಾ **8.76** ಇರುತ್ತದೆ. * ಇತರೆ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇಕಡಾ **0.17** ಇರುತ್ತದೆ. * ಬ್ಯಾಂಕಿನ ಒಟ್ಟು ಗಳಿಕೆಯು ದುಡಿಯುವ ಬಂಡವಾಳದ ಮೇಲೆ ಶೇಕಡಾ **1.92** ಇರುತ್ತದೆ. * ಬ್ಯಾಂಕಿನ ಆಸ್ತಿಗಳ ಮೇಲೆ ಬಂದ ಗಳಿಕೆಯ ಪ್ರಮಾಣವು ಶೇಕಡಾ **1.06** ಇರುತ್ತದೆ. * ಬ್ಯಾಂಕಿನ ವ್ಯವಹಾರವು ಪ್ರತಿ ಸಿಬ್ಬಂದಿಗೆ ರೂ. **1034.35** ಲಕ್ಷ ಇರುತ್ತದೆ. * ನಿವ್ವಳ ಲಾಭವು ಪ್ರತಿ ಸಿಬ್ಬಂದಿಗೆ ಹೋಲಿಸಿದಲ್ಲಿ ರೂ. **7.45** ಲಕ್ಷ ಇರುತ್ತದೆ.

9) ಠೇವಣಿಗಳ ಮೇಲೆ ವಿಮೆಯ ಪ್ರೀಮಿಯಂನ್ನು **ದಿನಾಂಕ : 21.05.2020** ಮತ್ತು **25.11.2020** ರಂದು ಒಟ್ಟು ರೂ.**56.13** ಲಕ್ಷ. ಡಿಪಾಸಿಟ್ ಇನ್ಶೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್‌ಗೆ ಮುಂಗಡವಾಗಿ ಜಮಾ ಮಾಡಿದೆ ಮತ್ತು ಅವರಿಗೆ ಕೊಡಬೇಕಾದ ಪ್ರೀಮಿಯಂ ಬಾಕಿ ಇರುವುದಿಲ್ಲ.

10) ಬ್ಯಾಂಕು ಸಾಲಾಂತ್ಯಕ್ಕೆ ಠೇವಣಾತಿ ಮತ್ತು ಭದ್ರತೆಗಳ ಆಧಾರದ ಮೇಲೆ ರೂ. **502.79** ಲಕ್ಷಗಳಿಗೆ ಬ್ಯಾಂಕ್ ಖಾತರಿ (**Bank Guarantee**)ಯನ್ನು ಕೊಟ್ಟಿರುತ್ತದೆ.

11) ಎನ್.ಪಿ.ಎ. :- ಪ್ರಸಕ್ತ ಸಾಲಿನ ಅಂತ್ಯಕ್ಕೆ ಇರುವಂತಹ ಈ ಕೆಳಕಂಡ ನಿಧಿಗಳ ಮೊಬಲಗನ್ನು ಹಿಂದಿನ ಸಾಲಿನಲ್ಲಿದ್ದ ನಿಧಿಗಳ ಮೊಬಲಗುಗಳೊಂದಿಗೆ ತುಲನೆ ಮಾಡಿದ ಹೋಲಿಕೆಯ ವಿವರಗಳು ಈ ಕೆಳಕಂಡಂತಿರುತ್ತದೆ.

(ರೂ. ಲಕ್ಷಗಳಲ್ಲಿ)

| ದಿನಾಂಕ | ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಬಾಧ್ಯತೆ ನಿಧಿ | ಗುಂತಾಯಿಸಿದ ಹಣದ ಮೇಲಿನ ಸವಕಳಿ ನಿಧಿ |
|---|---|---|---|
| 31.03.2021 | 1398.77 | 105.00 | 365.00 |
| 31.03.2020 | 1313.77 | 105.00 | 360.00 |
| **ವ್ಯತ್ಯಾಸ** | **85.00** | **0.00** | **5.00** |

12) ಡೆಫ್ ಖಾತೆಗೆ ವರ್ಗಾವಣೆಯಾಗಿರುವ ಮೊತ್ತ ರೂ. **84.55** ಲಕ್ಷ.

## ಲೆಕ್ಕ ಪರಿಶೋಧಕರ ಪ್ರಮಾಣ ಪತ್ರ :

ನಾನು, ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ, ಇದರ ಕೇಂದ್ರ ಕಛೇರಿ ಮತ್ತು ಆರು ಶಾಖೆಗಳ (ಕ್ರೋಢೀಕೃತ) **2020-21**ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇನೆ. ಇದಕ್ಕೆ ಸಂಬಂಧಪಟ್ಟ ಲೆಕ್ಕಪತ್ರದ ಪುಸ್ತಕಗಳು, ಒದಗಿಸಿದ ವಿವರಗಳು ಹಾಗೂ ಸ್ಪಷ್ಟೀಕರಣಗಳ ಮೇರೆಗೆ ನನ್ನ ತಿಳುವಳಿಕೆ ಹಾಗೂ ನಂಬಿಕೆ ಮೇರೆಗೆ ಇದರ ಜೊತೆಗೆ ಲಗತ್ತಿಸಿರುವ ಆಸ್ತಿ-ಜವಾಬ್ದಾರಿ ತಃಖ್ತೆ ಮತ್ತು ಲಾಭ-ನಷ್ಟ ತಃಖ್ತೆಯು ದಿನಾಂಕ: **31.03.2021**ಕ್ಕೆ ಇದ್ದಂತೆ ನನ್ನ ವರದಿಯಲ್ಲಿನ ಷರಾಗಳಿಗೆ ಒಳಪಟ್ಟು ಬ್ಯಾಂಕಿನ ನೈಜ ಆರ್ಥಿಕ ಸ್ಥಿತಿಗತಿಯನ್ನು ಪ್ರತಿಬಿಂಬಿಸುತ್ತದೆಂದು ದೃಢೀಕರಿಸುತ್ತೇನೆ.

ಸಹಿ/-
**ಎನ್. ಚನ್ನಬಸವಣ್ಣ**
**ಚಾರ್ಟರ್ಡ್ ಅಕೌಂಟೆಂಟ್ಸ್**
ಎಂ.ನಂ. 213853
ಮಾಲೀಕರು: ಮೆ|| ಚನ್ನಬಸವಣ್ಣ & ಕಂ.
ದಾವಣಗೆರೆ. ಎಫ್‌ಆರ್. ನಂ. 010580S
UDIN : 21213853AAAAGC7658

**ದಿನಾಂಕ : 09.09.2021**
**ಸ್ಥಳ: ದಾವಣಗೆರೆ.**

| ಡಿ.ವಿ. ಆರಾಧ್ಯಮಠ | ಮುಂಡಾಸ್ ವೀರೇಂದ್ರ | ಟಿ.ಎಸ್. ಜಯರುದ್ರೇಶ್ | ಬಿ.ಸಿ. ಉಮಾಪತಿ | ಅಂದನೂರು ಮುಪ್ಪಣ್ಣ | ಕೋಗುಂಡಿ ಬಕ್ಕೇಶಪ್ಪ |
|---|---|---|---|---|---|
| ಪ್ರಧಾನ ವ್ಯವಸ್ಥಾಪಕರು | ಚಾರ್ಟರ್ಡ್ ಅಕೌಂಟೆಂಟ್, ನಿರ್ದೇಶಕರು | ನಿರ್ದೇಶಕರು | ನಿರ್ದೇಶಕರು | ಉಪಾಧ್ಯಕ್ಷರು | ಅಧ್ಯಕ್ಷರು |

## ವೃತ್ತಗಳಲ್ಲಿ ನಾಮಫಲಕ ಹಾಕಿ : ಕರವೇ




ದಾವಣಗೆರೆ, ಅ.22- ಸ್ಮಾರ್ಟ್ ಸಿಟಿ ಕಾಮಗಾರಿ ಕೈಗೊಂಡಿರುವ ಕಾರಣ ಹಾಲಿ ಇದ್ದ ನಾಮಫಲಕಗಳನ್ನು ತೆರವುಗೊಳಿಸಲಾಗಿದೆ. ಪುನ: ನಗರದ ಪ್ರಮುಖ ವೃತ್ತಗಳಲ್ಲಿ ನಾಮಫಲಕ ಅಳವಡಿಸುವಂತೆ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಘಟಕದ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಒತ್ತಾಯಿಸಿದ್ದಾರೆ.

ವಿದ್ಯಾರ್ಥಿ ಭವನದ ಹತ್ತಿರದ ಶಾಂತವೇರಿ ಗೋಪಾಲಗೌಡ ವೃತ್ತ, ಅರುಣಾ ಚಿತ್ರಮಂದಿರದ ಬಳಿಯ ವೀರರಾಣಿ ಕಿತ್ತೂರು ಚನ್ನಮ್ಮ ವೃತ್ತ , ಗುಂಡಿ ಸರ್ಕಲ್‌ನ ಡಾ. ಎಂ.ಸಿ. ಮೋದಿ ವೃತ್ತ ಸೇರಿದಂತೆ, ನಗರದ ಪ್ರಮುಖ ವೃತ್ತಗಳ ನಾಮಫಲಕಗಳನ್ನು ಕೂಡಲೇ ಅಳವಡಿಸಬೇಕು ಎಂದು ಆಗ್ರಹಿಸಿ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ವೇದಿಕೆ ಪದಾಧಿಕಾರಿಗಳಾದ ಬಸಮ್ಮ, ಮಂಜುಳಮ್ಮ, ಶಾಂತಮ್ಮ, ಮಂಜುಳ ಮಾಂತೇಶ್, ಗೋಪಾಲ್ ದೇವರಮನಿ, ಡಿ. ಮಲ್ಲಿಕಾರ್ಜುನ್, ಪ್ರದೀಪ್, ಲೋಕೇಶ್, ಕೆ.ಜಿ. ಬಸವರಾಜ್ ಮತ್ತಿತರರಿದ್ದರು.

# ಜಗಳೂರಿನ ಜೆಡಿಎಸ್ ಅಭ್ಯರ್ಥಿ ದೇವೇಂದ್ರಪ್ಪ ಕಾಂಗ್ರೆಸ್ ಸೇರ್ಪಡೆ



ಜಗಳೂರು, ಅ.22- ಕಾಂಗ್ರೆಸ್ ಪಕ್ಷದ ತತ್ವ, ಸಿದ್ಧಾಂತಗಳನ್ನು ಒಪ್ಪಿ ಯಾರೇ ಪಕ್ಷಕ್ಕೆ ಬಂದರೂ ಪಕ್ಷಕ್ಕೆ ಆತ್ಮೀಯವಾಗಿ ಬರಮಾಡಿಕೊಳ್ಳಲಾಗುವುದು ಎಂದು ಮಾಜಿ ಶಾಸಕ ಹೆಚ್.ಪಿ.ರಾಜೇಶ್ ಹೇಳಿದ್ದಾರೆ.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಇಂದು ನಡೆದ ಸಮಾರಂಭದಲ್ಲಿ ಕಳೆದ ವಿಧಾನ ಸಭಾ ಚುನಾವಣೆಯ ಜೆ.ಡಿ.ಎಸ್. ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಚಿಕ್ಕಮ್ಮನಹಟ್ಟಿ ಬಿ.ದೇವೇಂದ್ರಪ್ಪ ಅವರನ್ನು ಪಕ್ಷಕ್ಕೆ ಸ್ವಾಗತಿಸಿ ಅವರು ಮಾತನಾಡಿದರು.

ದೇವೇಂದ್ರಪ್ಪ ಅವರು ಜೆ.ಡಿ.ಎಸ್.ನಿಂದ ಸ್ಪರ್ಧಿಸಿ ಸಾಮಾಜಿಕ ಸೇವಾ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದರು. ಆದರೆ ಹಲವು ಕಾರಣಗಳಿಂದಾಗಿ ಜೆ.ಡಿ.ಎಸ್. ತೊರೆದು ಕಾಂಗ್ರೆಸ್ ಸೇರುತ್ತಿರುವುದು ಜಾತ್ಯತೀತತೆಯ ಮನಸ್ಸುಗಳು ಒಗ್ಗಟ್ಟಾಗಿದ್ದರಿಂದ ನಮಗೆ ಆನೆಬಲ ಬಂದಂತಾಗಿದೆ ಎಂದರು.

ಮುಂದಿನ ವಿಧಾನಸಭಾ ಚುವಾವಣೆಯಲ್ಲಿ ಕಾಂಗ್ರೆಸ್ ಪಕ್ಷ ನೂರಕ್ಕೆ ನೂರರಷ್ಟು ಅಧಿಕಾರ ಹಿಡಿಯಲಿದೆ.

ಜೆಡಿಎಸ್‌ನಿಂದ ಕಾಂಗ್ರೆಸ್ ಪಕ್ಷಕ್ಕೆ ಬಂದ ಜೆಡಿಎಸ್ ತಾ.ಅಧ್ಯಕ್ಷರು ಸೇರಿದಂತೆ, ಕಾರ್ಯಕರ್ತರಿಗೆ ಸೂಕ್ತ ಸ್ಥಾನಮಾನ ನೀಡಲಾಗುವುದು ಎಂದು ತಿಳಿಸಿದರು.

ಮುಖಂಡ ಚಿಕ್ಕಮ್ಮನಹಟ್ಟಿ ಬಿ.ದೇವೇಂದ್ರಪ್ಪ ಮಾತನಾಡಿ, ಕಾಂಗ್ರೆಸ್ ಪಕ್ಷಕ್ಕೆ ಶಕ್ತಿ ತುಂಬಲು ಪಕ್ಷದ ತತ್ವ, ಸಿದ್ಧಾಂತ ಒಪ್ಪಿ ಕಾಂಗ್ರೆಸ್ ಸೇರಿದ್ದೇನೆ ಎಂದರು.

ಇದೇ ದಿನಾಂಕ 25ರ ಭಾನುವಾರ ಮಧ್ಯಾನ 3 ಗಂಟೆಗೆ ಬೆಂಗಳೂರು ಕೆಪಿಸಿಸಿ ಕಚೇರಿಯಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮಾಜಿ ಶಾಸಕ ಹೆಚ್.ಪಿ.ರಾಜೇಶ್ ನೇತೃತ್ವದಲ್ಲಿ ಅಧಿಕೃತವಾಗಿ ಸಮಾರಂಭ ನಡೆಯಲಿದೆ ಎಂದು ಅವರು ತಿಳಿಸಿದರು.

ಜೆ.ಡಿ.ಎಸ್. ಅಧ್ಯಕ್ಷ ದೇವಿಕೆರೆ ಗುರುಸಿದ್ದಪ್ಪ ಮಾತನಾಡಿ, ಜ್ಯಾತ್ಯತೀತ ನಿಲುವು ಹೊಂದಿರುವ ಕಾಂಗ್ರೆಸ್ ಪಕ್ಷವನ್ನು ಅಸಂಖ್ಯಾತ ಜೆ.ಡಿ.ಎಸ್.ಕಾರ್ಯಕರ್ತರೊಂದಿಗೆ ಸೇರುತ್ತಿದ್ದೇವೆ ಮುಂಬರುವ ದಿನಗಳಲ್ಲಿ ಪಕ್ಷಕ್ಕೆ ನಿಷ್ಠೆಯಿಂದ ಸಾಮೂಹಿಕ ನಾಯಕತ್ವದೊಂದಿಗೆ ಹೋರಾಟ ಮಾಡಿ ಪಕ್ಷ ಅಧಿಕಾರಕ್ಕೆ ತರೋಣ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮದ್, ಕಮ್ಮತ್ತಹಳ್ಳಿ ಮಂಜಣ್ಣ, ಕೆಪಿಸಿಸಿ ಎಸ್ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ.ಪಾಲಯ್ಯ, ಬ್ಲಾಕ್ ಕಾಂಗ್ರೆಸ್ ಉಸ್ತುವಾರಿ ಕಲ್ಲೇಶ್ ರಾಜ್ ಪಟೇಲ್, ಮಹಿಳಾ ಘಟಕದ ಅಧ್ಯಕ್ಷೆ ಕೆಂಚಮ್ಮ, ಜೆಡಿಎಸ್ ಮುಖಂಡರಾದ ಧನಂಜಯ ರೆಡ್ಡಿ, ತಿಪ್ಪೇಸ್ವಾಮಿ, ರಾಜಣ್ಣ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಜಿಲ್ಲಾಡಳಿತದಿಂದ ಕಿತ್ತೂರು ರಾಣಿ ಚನ್ನಮ್ಮ ಜಯಂತಿ



ದಾವಣಗೆರೆ, ಅ.22- ವೀರ ಮಹಿಳೆ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಧೀರ ಮಹಿಳೆ ಕಿತ್ತೂರು ರಾಣಿ ಚನ್ನಮ್ಮ ಜಯಂತಿಯನ್ನು ಕೋವಿಡ್-19 ಹಿನ್ನೆಲೆಯಲ್ಲಿ ನಾಳೆ ದಿನಾಂಕ 23ರ ಶನಿವಾರ ಬೆಳಿಗ್ಗೆ 10.30ಕ್ಕೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸರಳವಾಗಿ ಆಚರಿಸಲಾಗುವುದು ಎಂದು ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ವಿಜಯ ಮಹಾಂತೇಶ್ ದಾನಮ್ಮನವರ್ ತಿಳಿಸಿದ್ದಾರೆ.

ಕಿತ್ತೂರು ರಾಣಿ ಚನ್ನಮ್ಮ ಜಯಂತಿ ಆಚರಣೆ ಕುರಿತು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಯಾವುದೇ ಮೆರವಣಿಗೆಗೆ ಅವಕಾಶವಿರುವುದಿಲ್ಲ. ಕಾರ್ಯಕ್ರಮದ ಅಂಗವಾಗಿ ಕಿತ್ತೂರು ರಾಣಿ ಚನ್ನಮ್ಮ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಗುವುದು. ವಚನ ಗಾಯನ ಕಾರ್ಯಕ್ರಮ, ರಾಣಿ ಚನ್ನಮ್ಮ ಅವರ ಜೀವನ ಸಾಧನೆ ಕುರಿತಂತೆ ವಿಶೇಷ ಉಪನ್ಯಾಸ ಏರ್ಪಡಿಸಲಾಗಿದೆ ಎಂದು ಅವರು ಹೇಳಿದರು.

ವೀರ ಮಹಿಳೆ ಕಿತ್ತೂರು ರಾಣಿ ಚನ್ನಮ್ಮ ಅವರು ಈ ದೇಶದ ಪ್ರಥಮ ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿದ್ದು, ಅವರ ಪುತ್ಥಳಿಯನ್ನು ನಗರದಲ್ಲಿರುವ ಕಿತ್ತೂರು ರಾಣಿ ಚನ್ನಮ್ಮ ವೃತ್ತದಲ್ಲಿ ಸ್ಥಾಪಿಸಬೇಕು, ಎಲ್ಲ ಗ್ರಾಮ ಪಂಚಾಯತಿಗಳಲ್ಲಿಯೂ ಕೂಡ ಜಯಂತಿ ಆಚರಣೆ ಆಗುವಂತಾಗಬೇಕು ಎಂದು ಸಮಾಜದ ಮುಖಂಡರು ಈ ಸಂದರ್ಭದಲ್ಲಿ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಪಂ ಸಿಇಒ ಅವರು ಈ ಕುರಿತು ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗುವುದು ಎಂದು ಭರವಸೆ ನೀಡಿದರು.

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಕುಮಾರಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಸಮಾಜದ ಮುಖಂಡರಾದ ಶಾಂತಕುಮಾರ್, ಅಶೋಕ್‌ಕುಮಾರ್ ಮತ್ತಿತರು ಸಭೆಯಲ್ಲಿ ಪಾಲ್ಗೊಂಡಿದ್ದರು.

## ವಿಕಲಚೇತನರ ಗ್ರಾಮೀಣ ಪುನರ್ವಸತಿ ಯೋಜನೆ

**ಅವಧಿ ವಿಸ್ತರಣೆ**

ದಾವಣಗೆರೆ, ಅ. 22- ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಗಳ ಕಛೇರಿ ವತಿಯಿಂದ ವಿಕಲಚೇತನರ ಗ್ರಾಮೀಣ ಪುನರ್ವಸತಿ ಯೋಜನೆಯಡಿ ಅರ್ಹ ವಿಕಲಚೇತನ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಇದೇ ದಿನಾಂಕ 30 ರವರೆಗೆ ವಿಸ್ತರಿಸಲಾಗಿದೆ.

ವಿವರಕ್ಕೆ ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿಗಳ ಕಛೇರಿ, ಶಂಕರಲೀಲಾ ಗ್ಯಾಸ್ ಏಜೆನ್ಸಿ ಹತ್ತಿರ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ, ದೂರವಾಣಿ : 08192-263939 ಇವರನ್ನು ಸಂಪರ್ಕಿಸಬಹುದು.

## ಹರಪನಹಳ್ಳಿಯಲ್ಲಿ ನಾಳೆ ಪ್ರಾಣಾಯಾಮ ತರಬೇತಿ

ಹರಪನಹಳ್ಳಿ, ಅ.22- ಪಟ್ಟಣದ ಹಡಗಲಿ ರಸ್ತೆಯ ಕಾಶಿ ಮಠದಲ್ಲಿ ನಾಡಿದ್ದು ದಿನಾಂಕ 24 ರ ಭಾನುವಾರ ಸಂಜೆ 6 ಗಂಟೆಗೆ ಆನಂದ ಯೋಗ ಪ್ರಾಣಾಯಾಮ ತರಬೇತಿ ಶಿಬಿರ ನಡೆಯಲಿದೆ.

ಧ್ಯಾನ, ಪ್ರಾಣಾಯಾಮ, ಶಿವಶಕ್ತಿ ಧ್ಯಾನ, ಕುಂಡಲಿನಿ ಧ್ಯಾನ, ಯೋಗ ನಿದ್ರೆ, ಬಸ್ತಿಕ, ಕಪಾಲ ಬಾತಿ ಹೀಗೆ ವೈವಿಧ್ಯಮಯ ತರಬೇತಿ ಹಾಗೂ ದೈಹಿಕ ಮತ್ತು ಮಾನಸಿಕ ಕಾಯಿಲೆಗಳ ಪರಿಹಾರಕ್ಕಾಗಿ 10 ದಿನಗಳ ಕಾಲ ತರಬೇತಿ ನೀಡಲಾಗುತ್ತದೆ ಎಂದು ಕೊಟ್ಟೂರಿನ ಮಂಜುನಾಥ ಗುರೂಜಿ ತಿಳಿಸಿದ್ದಾರೆ.

# ದೇಶದಲ್ಲಿ 100 ಕೋಟಿ ಡೋಸ್ ಕೊರೊನಾ ಲಸಿಕೆ : ಅಭಿನಂದನೀಯ



ದಾವಣಗೆರೆ, ಅ.22- ದೇಶದಲ್ಲಿ ಅತಿ ವೇಗವಾಗಿ 100 ಕೋಟಿ ಡೋಸ್ ಕೊರೊನಾ ಲಸಿಕೆ ನೀಡಿರುವುದಕ್ಕೆ ಹರ್ಷ ವ್ಯಕ್ತಪಡಿಸಿರುವ ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಈ ಯಶಸ್ಸಿನಲ್ಲಿ ಭಾಗಿಯಾದ ಎಲ್ಲರಿಗೂ ಅಭಿನಂದನೆ ತಿಳಿಸಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವದ ಯಾವ ರಾಷ್ಟ್ರದಲ್ಲೂ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಲಸಿಕೆ ನೀಡಲು ಸಾಧ್ಯವಾಗಿಲ್ಲ ಎಂದರು.

ಪ್ರಧಾನಿ ನರೇಂದ್ರ ಮೋದಿಯವರು ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸಿ, ದೇಶದ ವಿಜ್ಞಾನಿಗಳು ಹಾಗೂ ವೈದ್ಯರನ್ನು ಹುರಿದುಂಬಿಸಿ, ಕೇವಲ 9 ತಿಂಗಳ ಅವಧಿಯಲ್ಲಿ ಅತ್ಯಂತ ವೇಗವಾಗಿ ನಾಗರಿಕರಿಗೆ ಕೊರೊನಾ ಲಸಿಕೆ ನೀಡಿದ್ದಾರೆ. ರಾಜ್ಯದಲ್ಲೂ ಸಹ 6 ಕೋಟಿ ಲಸಿಕೆ ನೀಡಲಾಗಿದೆ. ಲಸಿಕೆ ತಯಾರಿಕೆ ಹಾಗೂ ಅಭಿಯಾನದಲ್ಲಿ ಭಾಗಿಯಾದ ವಿಜ್ಞಾನಿಗಳು, ವೈದ್ಯರು, ದಾದಿಯರು ಹಾಗೂ ಆರೋಗ್ಯ ಇಲಾಖೆಯ ಎಲ್ಲ ಸಿಬ್ಬಂದಿ ಅಭಿನಂದನಾರ್ಹರು ಎಂದು ಹೇಳಿದರು.

ಹಿಂದೆಲ್ಲಾ ಸಾಂಕ್ರಾಮಿಕ ಕಾಯಿಲೆಗಳಿಗೆ ಲಸಿಕೆ ಪಡೆಯಲು ಅನ್ಯ ದೇಶಗಳ ಮೇಲೆ ಅವಲಂಬಿತರಾಗಿದ್ದೆವು. ಆದರೆ ಕೊರೊನಾ ಲಸಿಕೆಯನ್ನು ಅತಿ ಶೀಘ್ರದಲ್ಲೇ ನಮ್ಮ ದೇಶದಲ್ಲಿ ತಯಾರಿಸಿ, ಬೇರೆ ರಾಷ್ಟ್ರಗಳಿಗೂ ರಫ್ತು ಮಾಡಿರುವುದು ಹೆಮ್ಮೆಯ ವಿಚಾರ ಎಂದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್.ಜಗದೀಶ್ ಮಾತನಾಡುತ್ತಾ, ಲಸಿಕೆ ನೀಡಿಕೆಯಲ್ಲಿ ಸಾಧನೆ ಮಾಡಿದ ಹಿನ್ನೆಲೆಯಲ್ಲಿ ಬಿಜೆಪಿಯಿಂದ ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಿಬ್ಬಂದಿಗೆ ಸಿಹಿ ವಿತರಿಸಿ ಸನ್ಮಾನಿಸಲಾಗುಗುವುದು. ನಾಳೆ ದಿನಾಂಕ 23ರಂದು ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಸಂಸದರು ಹಾಗೂ ಜನಪ್ರತಿನಿಧಿಗಳ ನೇತೃತ್ವದಲ್ಲಿ ವೈದ್ಯರು, ಕೊರೊನಾ ವಾರಿಯರ್‌ಗಳಿಗೆ ಸನ್ಮಾನ, ಸಿಹಿ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು.

ಪಕ್ಷದ ಮುಖಂಡರುಗಳಾದ ಸೊಕ್ಕೆ ನಾಗರಾಜ್, ಮಂಜಾನಾಯ್ಕ, ಶಿವರಾಜ್ ಪಾಟೀಲ್, ಡಿ.ಎಸ್.ಶಿವಶಂಕರ್, ಹೆಚ್. ಪಿ.ವಿಶ್ವಾಸ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

**2ನೇ ಡೋಸ್ ಕೊರೊನಾ ಲಸಿಕೆ ಪಡೆಯದಿದ್ದರೂ ಯಶಸ್ವಿಯಾಗಿ ಲಸಿಕೆ ಪಡೆಯಲಾಗಿದೆ ಎಂಬ ಸಂದೇಶ ಬರುತ್ತಿರುವುದು ಗಮನಕ್ಕೆ ಬಂದಿದ್ದು, ಇಂತಹ ತಪ್ಪುಗಳಾಗಬಾರದು. ಈ ಬಗ್ಗೆ ಮುಖ್ಯಮಂತ್ರಿಗಳು, ಆರೋಗ್ಯ ಸಚಿವರ ಗಮನಕ್ಕೆ ತಂದು ಸಂಬಂಧಪಟ್ಟವರ ಬಗ್ಗೆ ತನಿಖೆ ನಡೆಸುವಂತೆ ಮನವಿ ಮಾಡುವುದಾಗಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್ ಹೇಳಿದರು.**

# ಮೈದೂರು ಗ್ರಾ.ಪಂ.ಗೆ ದೇವರಾಜ್ ಅಧ್ಯಕ್ಷ




ಹರಪನಹಳ್ಳಿ, ಅ.22- ತಾಲ್ಲೂಕಿನ ಮೈದೂರು ಗ್ರಾಮ ಪಂಚಾಯ್ತಿಯ ನೂತನ ಅಧ್ಯಕ್ಷರಾಗಿ ಹೊಂಬಣ್ಣನವರ ದೇವರಾಜ್ ಆಯ್ಕೆಯಾಗಿದ್ದಾರೆ.

ಕೆ.ಗುರುಲಿಂಗನಗೌಡ ಅವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಿತು.

ಒಟ್ಟು 21 ಸದಸ್ಯ ಸ್ಥಾನಗಳ ಪೈಕಿ ಬಿಜೆಪಿ ಬೆಂಬಲಿತ 12 ಹಾಗೂ ಕಾಂಗ್ರೆಸ್ ಬೆಂಬಲಿತ 9 ಸ್ಥಾನಗಳನ್ನು ಹೊಂದಿದ್ದು, ಬಿಜೆಪಿ ಬೆಂಬಲಿತ ಸದಸ್ಯ ಹೊಂಬಣ್ಣನವರ ದೇವರಾಜ್ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಹಾಗೂ ಉಪಾಧ್ಯಕ್ಷರಾಗಿ ನಾಗಮ್ಮ ಮುಂದುವರೆದಿದ್ದಾರೆ ಎಂದು ಚುನಾವಣಾಧಿಕಾರಿ ಯಾಗಿ ನೇಮಕವಾಗಿದ್ದ ಉಪವಿಭಾಗಾಧಿಕಾರಿ ಎಚ್.ಜಿ. ಚಂದ್ರಶೇಖರಯ್ಯ ತಿಳಿಸಿದ್ದಾರೆ.

ಈ ವೇಳೆ ಬಿಜೆಪಿ ತಾಲ್ಲೂಕು ಘಟಕದ ಪ್ರಧಾನ ಕಾರ್ಯದರ್ಶಿ ಎ.ಉದಯಕುಮಾರ್, ವಕೀಲರಾದ ಮಲ್ಲಿಕಾರ್ಜುನ್, ಮೈದೂರು ಮಾರುತಿ, ಬಳಿಗನೂರು ನಾಗರಾಜ್, ಕೆ.ನಿಂಗೇಶ್, ಪಿ.ಪಕ್ಕಿರಪ್ಪ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಕಿತ್ತೂರು ಚನ್ನಮ್ಮಾಜಿ ವಿಜಯೋತ್ಸವ

ಜಿಲ್ಲಾ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದಿಂದ ವೀರರಾಣಿ ಕಿತ್ತೂರು ಚನ್ನಮ್ಮಾಜಿ 198ನೇ ವಿಜಯೋತ್ಸವವು ಇಂದು ಬೆಳಿಗ್ಗೆ 9 ಕ್ಕೆ ಕಿತ್ತೂರು ಚೆನ್ನಮ್ಮ ವೃತ್ತದಲ್ಲಿ ನಡೆಯಲಿದೆ. ನಂತರ ಸಂಜೆ 6 ಕ್ಕೆ ಜಿಲ್ಲಾ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಕಛೇರಿಯಲ್ಲಿ ಕಿತ್ತೂರು ಚೆನ್ನಮ್ಮ ವಿಜಯೋತ್ಸವ ಜರುಗಲಿದೆ.

# ಉದ್ಯಾನವನದಲ್ಲಿನ ಗುಂಡಿ ಮುಚ್ಚಿಸಿದ ಪಾಲಿಕೆ ಸದಸ್ಯ ಮಂಜುನಾಥ್



ದಾವಣಗೆರೆ, ಅ.22- ನಗರದ ಕಾಸಲ್ ಶ್ರೀನಿವಾಸ ಶ್ರೇಷ್ಠಿ ಉದ್ಯಾನವನದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ನಗರ ಪಾಲಿಕೆಯ 38ನೇ ವಾರ್ಡಿನ ಸದಸ್ಯ ಗಡಿಗುಡಾಳ್ ಮಂಜುನಾಥ್ ತಿಳಿಸಿದ್ದಾರೆ.

ಹಾಳಾಗಿದ್ದ ಪಾರ್ಕ್‌ನ ವಾಕಿಂಗ್ ಪಾತ್‌ನ್ನು ಈ ಹಿಂದೆ ಸರಿಪಡಿಸಲಾಗಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಬಿಡದೇ ಸುರಿದ ಭಾರೀ ಮಳೆಯಿಂದಾಗಿ ಮತ್ತೆ ಹಾಳಾಗಿದೆ. ಪಕ್ಕದಲ್ಲಿ ನೀರಿನ ಜಲಾಗಾರ ಇದ್ದು, ಅದರ ನೀರು ಕೆಳಗೆ ಬಸಿದು ಹೋಗುತ್ತಿರುವುದರಿಂದ ಪಾದಚಾರಿಗಳು ನಡೆಯುವ ಸ್ಥಳದ ಬದಿ ಕುಸಿದಿರುತ್ತದೆ. ಸದ್ಯಕ್ಕೆ ತಾತ್ಕಾಲಿಕವಾಗಿ ಸರಿಪಡಿಸಿದ್ದು, ಅನುದಾನ ಬಂದ ನಂತರ ಶಾಶ್ವತವಾಗಿ ಸರಿಪಡಿಸುವ ಕಾರ್ಯವನ್ನು ಮಾಡಲಾಗುವುದು ಎಂದು ಮಂಜುನಾಥ್ ಹೇಳಿದ್ದಾರೆ.

## ಆವರಗೊಳ್ಳ ಗ್ರಾ.ಪಂ. ಅಧ್ಯಕ್ಷರಾಗಿ ವೀರಣ್ಣ



ದಾವಣಗೆರೆ, ಅ.22 - ಆವರಗೊಳ್ಳ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ಜಿ.ಟಿ. ವೀರಣ್ಣ ಅವರಿಗೆ ದಾವಣಗೆರೆ 15ನೇ ವಾರ್ಡ್‌ನ ಮಹಾನಗರ ಪಾಲಿಕೆ ಸದಸ್ಯೆರಾದ ಶ್ರೀಮತಿ ಡಿ.ಎಸ್. ಆಶಾ ಪತಿ ಉಮೇಶ್ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ವೀರಭದ್ರಪ್ಪ, ಟಿ.ಜಯ್ಯಪ್ಪ, ಕೊಳೇನಹಳ್ಳಿ, ಕೆ.ಎಂ. ವೀರಯ್ಯ ಸ್ವಾಮಿ ಹಾಜರಿದ್ದರು.

## ಚೀನಾದಲ್ಲಿ ಮತ್ತೆ ಕಂಡ ಕೊರೊನಾ

**(1ನೇ ಪುಟದಿಂದ)** ಚೀನಾ ದಂಪತಿ ದೇಶಾದ್ಯಂತ ಸಂಚರಿಸುವಾಗ ಸೋಂಕು ಹರಡಿರುವುದೇ ಇತ್ತೀಚಿನ ಸಮಸ್ಯೆಗೆ ಕಾರಣವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಬೀಜಿಂಗ್, ಇನ್ನರ್ ಮಂಗೋಲಿಯ, ಗನ್ಸು, ಶಾಂಕ್ಸಿ, ನಿಂಕ್ಸಿಯ, ಗ್ಯುಝೌ ಹಾಗೂ ಕಿಂಘೈಗಳಲ್ಲಿ ಸೋಂಕು ಪ್ರಕರಣಗಳು ಕಂಡು ಬಂದಿವೆ.

# ರಾಹುಲ್‌ಗಾಂಧಿ ವಿರುದ್ಧದ ಹೇಳಿಕೆ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ



ದಾವಣಗೆರೆ, ಅ.22 - ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಕುರಿತು ಅವಹೇಳನಕಾರಿಯಾಗಿ ಮಾತನಾಡಿರುವ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿಕೆಯ ವಿರುದ್ಧ ದಾವಣಗೆರೆ ದಕ್ಷಿಣ ಮತ್ತು ಉತ್ತರ ವಿಧಾನಸಭಾ ಕ್ಷೇತ್ರದ ಯುವ ಕಾಂಗ್ರೆಸ್ ವತಿಯಿಂದ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ನವೀನ್ ನಲವಾಡಿ ನೇತೃತ್ವದಲ್ಲಿ ನಗರದ ಜಯದೇವ ವೃತ್ತದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ ಕೆ ಶೆಟ್ಟಿ ಮಾತನಾಡಿ, ಗಡೀಪಾರಾಗಿದ್ದಂತಹ ಅಮಿತ್ ಶಾ ಇಂದು ಕೇಂದ್ರ ಗೃಹ ಸಚಿವ, ಅವರ ಮಗ ಮತ್ತು ಅದಾನಿ ಮಾಲೀಕತ್ವದ ಬಂದರಿನಲ್ಲಿ 3000 ಕೆಜಿ ಡ್ರಗ್ಸ್ ಪತ್ತೆಯಾಗಿದ್ದು, ಅದರ ಬಗ್ಗೆ ಕ್ರಮ ತೆಗೆದುಕೊಳ್ಳದೆ ಮೌನವಾಗಿರುವ ಕೇಂದ್ರ ಸರ್ಕಾರ, ಈ ತಪ್ಪನ್ನು ಮರೆಮಾಚಿ, ವಿಷಯಾಂತರ ಮಾಡಲು ರಾಹುಲ್ ಗಾಂಧಿ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುತ್ತಿರುವ ಬಿಜೆಪಿ ರಾಜ್ಯಾಧ್ಯಕ್ಷರು ಒಬ್ಬ ಮಾನಸಿಕ ಅಸ್ವಸ್ಥರಾಗಿದ್ದು, ತಾವು ಇನ್ನೂ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದಲ್ಲಿ ಇದ್ದೇನೆ ಎಂದು ತೋರಿಸಲು ಕೀಳುಮಟ್ಟದ ಭಾಷೆ ಬಳಸುತ್ತಿದ್ದಾರೆ ಎಂದು ಕಿಡಿ ಕಾರಿದರು.

ದಾವಣಗೆರೆ ಉತ್ತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ. ಶಿವಕುಮಾರ್ ಮಾತನಾಡಿ, ನಳಿನ್ ಕುಮಾರ್ ಕಟೀಲ್ ರವರ ಭಾಷೆ ಬಿಜೆಪಿಯ ಸಂಸ್ಕೃತಿಯನ್ನು ತೋರಿಸುತ್ತದೆ ಎಂದು ಛೇಡಿಸಿದರು.


ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮತಿ ಅನಿತಾಬಾಯಿ ಮಾಲತೇಶರಾವ್ ಜಾಧವ್ ಮಾತನಾಡಿ, ಕಟೀಲ್ ಅವರು ತಮ್ಮ ಸ್ಥಾನವನ್ನು ಭದ್ರಮಾಡಿಕೊಳ್ಳಲು ಈ ರೀತಿಯ ಹೇಳಿಕೆ ನೀಡುವ ಮೂಲಕ ಬಿಜೆಪಿ ಹೈಕಮಾಂಡನ್ನು ಮೆಚ್ಚಿಸುತ್ತಿದ್ದಾರೆ ಎಂದರು.

**ಬಿಜೆಪಿ ಅಧ್ಯಕ್ಷ ಕಟೀಲ್ ಮಾನಸಿಕ ಅಸ್ವಸ್ಥ.**

- ದಿನೇಶ್ ಕೆ.ಶೆಟ್ಟಿ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್, ಕೆ.ಎಂ. ಮಂಜುನಾಥ್, ನಂಜಾ ನಾಯ್ಕ್, ಸುಷ್ಮಾ ಪಾಟೀಲ್, ನಾಗರತ್ನ, ಮೊಹಮ್ಮದ್ ಜಿಕ್ರಿಯಾ, ರಾಘವೇಂದ್ರ ಗೌಡ, ಮಹಬೂಬ್ ಬಾಷಾ, ಹಬೀಬಾ, ವಿನಯ್ ಜೋಗಪ್ಪನವರ್, ರಿಯಾಜುದ್ದೀನ್, ಅಹ್ಮದ್ ಖಾನ್, ರಿಹಾನ್, ದೀಪಕ್ ಶಿವರಾಜ್, ಶಿಲ್ಪ, ಜಯಾ ಶಾಮನೂರು ಮುಂತಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಹೊನ್ನಾಳಿ ತಾಲ್ಲೂಕಿನಲ್ಲಿ ಮಳೆಯಿಂದ ಏಳು ಮನೆಗಳ ಹಾನಿ



ಹೊನ್ನಾಳಿ, ಅ.22 - ನಿನ್ನೆ ರಾತ್ರಿಯಿಂದ ಇಂದು ಬೆಳಗಿನ ಜಾವದವರೆಗೆ ಸುರಿದ ನಿರಂತರ ಗುಡುಗು ಸಹಿತ ಮಳೆಯಿಂದಾಗಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿನ ಏಳು ಮನೆಗಳು ಹಾನಿಗೊಳಗಾಗಿದ್ದು, ಒಟ್ಟು 4.60 ಲಕ್ಷ ರೂ.ಗಳಷ್ಟು ಹಾನಿ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ.

ಬೆನಕನಹಳ್ಳಿ ಗ್ರಾಮದ ಹಳದಪ್ಪ, ಹೊನ್ನಾಳಿ ಪಟ್ಟಣದ ಒಂದು ಮನೆ ಭಾಗಶಃ ಹಾನಿಗೊಳಗಾಗಿವೆ. ಸುಂಕದಕಟ್ಟೆ ಗ್ರಾಮದ ಎರಡು ಮನೆ, ಎಚ್. ಗೋಪಗೊಂಡನಹಳ್ಳಿಯ ಒಂದು ಮನೆ, ಬಿದರಗಡ್ಡೆಯ ಒಂದು ಮನೆ, ದೊಡ್ಡೇರಹಳ್ಳಿಯ ಒಂದು ಮನೆ ಭಾಗಶಃ ಹಾನಿಗೊಳಗಾಗಿವೆ. ಕಂದಾಯ ಇಲಾಖೆಯ ಅಧಿಕಾರಿಗಳು ಶುಕ್ರವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

**ಭಾರೀ ಮಳೆ:** ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕಿನಾದ್ಯಂತ ಗುರುವಾರ ರಾತ್ರಿ 8.50 ರಿಂದ ಶುಕ್ರವಾರ ಬೆಳಗಿನ ಜಾವ 4ರವರೆಗೂ ಬಿಟ್ಟೂ ಬಿಡದೇ ಭಾರೀ ಮಳೆ ಸುರಿಯಿತು. ಒಟ್ಟು 362.2 ಮಿಮೀ. ಮಳೆ ಸುರಿದಿದೆ.

**ಮಳೆ ವಿವರ :** ಹೊನ್ನಾಳಿ-108 ಮಿಮೀ, ಸವಳಂಗ - 63.2, ಬೆಳಗುತ್ತಿ - 59.8, ಗೋವಿನಕೋವಿ - 54.8, ಹರಳಹಳ್ಳಿ-35.6 ಸಾಸ್ವೆಹಳ್ಳಿ - 25.4, ಕುಂದೂರು - 15.4 ಮಿಮೀ ಮಳೆಯಾಗಿದೆ.


## ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಕಂಡ ಷೆಡ್ಯೂಲ್ ಸೊತ್ತುಗಳ ಮಾಲೀಕರಾದ ಶ್ರೀ ಪ್ರಕಾಶ್.ಬಿ.ಹೆಚ್. ಬಿನ್ ಲೇಟ್ ಹನುಮಂತಪ್ಪ ಬೆಳಕೇರಿ ವಾಸ: ಸುಣಗಾರ ಬೀದಿ, ಹರಿಹರ ಇವರು ಷೆಡ್ಯೂಲ್ ಸೊತ್ತನ್ನು ದಿನಾಂಕ: 09.07.2021ರಲ್ಲಿ ನೊಂದಾವಣೆಯಾದ ಪಾಲು ವಿಭಾಗ ಪತ್ರದ ಸಂಖ್ಯೆ:964/2021-22ರ ಮೂಲಕ ಮಾಲೀಕರಾಗಿದ್ದು, ಸದರಿ ಸೊತ್ತನ್ನು ಅಡಮಾನ ಮಾಡಿ ಸಾಲ ಪಡೆಯಲು ಶ್ರೀರಾಮ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ದಾವಣಗೆರೆ ಶಾಖೆ ಇವರಲ್ಲಿ ಸಾಲ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿರುತ್ತಾರೆ.

ಆದ್ದರಿಂದ, ಸದರಿ ಸೊತ್ತುಗಳ ಮೇಲೆ ಯಾವುದಾದರೂ ವ್ಯಕ್ತಿಗಳಿಗಾಗಲೀ, ಹಣಕಾಸು ಸಂಸ್ಥೆಗಳಿಗಾಗಲೀ, ಯಾವುದೇ ವಿಧದ ಹಕ್ಕಿದ್ದಲ್ಲಿ, ಹೊಣೆಗಾರಿಕೆಗಳಿದ್ದಲ್ಲಿ, ಪಾಲುದಾರಿಕೆ ಇದ್ದಲ್ಲಿ, ಅಡವಿನ ಅಧಿಕಾರವಿದ್ದಲ್ಲಿ ಅಥವಾ ಯಾವುದೇ ರೂಪದ ತಕರಾರುಗಳಿದ್ದಲ್ಲಿ ಅವರು ತಮ್ಮ ಆಕ್ಷೇಪಣೆಗಳನ್ನು ದೃಢೀಕರಿಸುವ ದಾಖಲೆ ಪತ್ರಗಳೊಂದಿಗೆ ಶ್ರೀರಾಮ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ದಾವಣಗೆರೆ ಶಾಖೆಗಾಗಲೀ ಈ ಕೆಳಗೆ ಸಹಿ ಮಾಡಿರುವವರಿಗೆ ಈ ಪ್ರಕಟಣೆ ಪ್ರಕಟವಾದ ಏಳು(7) ದಿನಗಳೊಳಗಾಗಿ ಸಲ್ಲಿಸಬಹುದು.

**ಷೆಡ್ಯೂಲ್:** ಹರಿಹರ ತಾಲ್ಲೂಕು, ಹರಿಹರ ಸಿಟಿ, ಬಿ ಡಿವಿಜನ್, ಸುಣಗಾರ ಬೀದಿಯಲ್ಲಿರುವ ಹರಿಹರ ನಗರಸಭೆ ಅಸೆಸ್‌ಮೆಂಟ್ ನಂ.423/318/423, ಸ್ವತ್ತಿನ ಸಂಖ್ಯೆ: 12-1-111-4, ಇದರ ಅಳತೆ: 8.229616×5.18 ಮೀಟರ್ ಉಳ್ಳ ಆರ್.ಸಿ.ಸಿ. ಮೇಲ್ಛಾವಣಿವುಳ್ಳ ಸೊತ್ತು. ಇದಕ್ಕೆ ಚಕ್ಕುಬಂದಿ; ಪೂರ್ವಕ್ಕೆ: ಏಕಾನಾಥೇಶ್ವ ದೇವಸ್ಥಾನ, ಪಶ್ಚಿಮಕ್ಕೆ: ಸಾಕಮ್ಮನವರ ಮನೆ, ಉತ್ತರಕ್ಕೆ: ಹನುಮಂತಪ್ಪ ಛತ್ರದರ ಇವರ ಮನೆ, ದಕ್ಷಿಣಕ್ಕೆ: ರಸ್ತೆ.

**ದಾವಣಗೆರೆ**
**ದಿನಾಂಕ: 18.10.2021**

**ಶಾಮನೂರು ಪ್ರಕಾಶ್, ವಕೀಲರು, 2159/2,4ನೇ ಮುಖ್ಯರಸ್ತೆ, ಎಂ.ಸಿ.ಸಿ ಎ ಬ್ಲಾಕ್, ದಾವಣಗೆರೆ. ಮೊ.94495 12232**



## REQUIRED

**MEDICAL OFFICER** — 1 Post
(M.D. (Pathology) or M.B.B.S. wih atleast 6 months Working Experience in Blood Centre)

**Office Manager** — 1 Post
(Any Degree, having Administrative Experience, Above 45 years age, Retired Employees can also apply)

**Attender cum Driver for Ambulance** — 1 Post
(Having vaild Driving Licence)

Send your Resume to redcrossdvg@gmail.com or handover to General Secretary,

**INDIAN REDCROSS SOCIETY**
Dr. Shamanur Shivashankarappa Red cross Bhavana, No: 302, 'A' Block, Devaraj urs Layout, DAVANGERE-577006. ✆ 08192-252550



## ವಿಜಯ ಸಂಕಲ್ಪ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಆವರಗೆರೆ

### ಚುನಾವಣಾ ನೋಟೀಸು

ಸದರಿ ಸಹಕಾರಿಯ ಆಡಳಿತ ಮಂಡಳಿಯ ಸಾಮಾನ್ಯ ಚುನಾವಣೆಯನ್ನು **'ದಿನಾಂಕ : 07.11.2021ರ ಭಾನುವಾರದಂದು ವಿಜಯ ಸಂಕಲ್ಪ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಆವರಗೆರೆ, ದಾವಣಗೆರೆ ತಾಲ್ಲೂಕು, ದಾವಣಗೆರೆ'** ಇದರ ಆವರಣದಲ್ಲಿ ನಡೆಸಲು ದಿನಾಂಕ ನಿಗದಿಪಡಿಸಿ ವೇಳಾಪಟ್ಟಿಯನ್ನು ರಿಟರ್ನಿಂಗ್ ಅಧಿಕಾರಿಯವರಾದ ಒ. ಮಂಜುನಾಥಸ್ವಾಮಿಯವರು ಹೊರಡಿಸಿರುತ್ತಾರೆ.

ಚುನಾಯಿಸಬೇಕಾದ ನಿರ್ದೇಶಕರ ಒಟ್ಟು ಸಂಖ್ಯೆ-13, ಈ ಪೈಕಿ ಸಾಮಾನ್ಯ ವರ್ಗ-07, ಮಹಿಳಾ ಮೀಸಲು-02, ಹಿಂದುಳಿದ ವರ್ಗ 'ಎ'-02, ಪರಿಶಿಷ್ಟ ಜಾತಿ -01 ಮತ್ತು ಪರಿಶಿಷ್ಟ ಪಂಗಡ-01.

ಅರ್ಹ ಸದಸ್ಯರು ನಾಮ ಪತ್ರವನ್ನು **'ದಿನಾಂಕ : 23.10.2021 ರಿಂದ 31.10.2021ರವರೆಗೆ ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆಯೊಳಗಾಗಿ'** ಸಹಕಾರಿಯ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಯವರಿಗೆ ಸಲ್ಲಿಸಲು ಕೋರಲಾಗಿದೆ.

**ಸಂಪರ್ಕಿಸಬೇಕಾದ ದೂರವಾಣಿ : 98459 63372**

**ಸಹಿ/- ಕಾರ್ಯದರ್ಶಿ**

# ಡಿಪ್ಲೋಮಾ : ದಾವಣಗೆರೆ ಅರ್ಬನ್ ಬ್ಯಾಂಕ್‌ಗೆ ರಾಜ್ಯಕ್ಕೆ ಪ್ರಥಮ ಸ್ಥಾನ ಸೇರಿ, 4 ಅತ್ಯುನ್ನತ ಶ್ರೇಣಿಗಳು

ದಾವಣಗೆರೆ,ಅ.22- ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್‌ನಲ್ಲಿನ ಕರ್ನಾಟಕ ರಾಜ್ಯ ಮಟ್ಟದ ಪರೀಕ್ಷೆಯಲ್ಲಿ ನಗರದ ಪ್ರತಿಷ್ಠಿತ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಗೆ ಅತ್ಯಧಿಕ ನಾಲ್ಕು ಅತ್ಯುನ್ನತ ಶ್ರೇಣಿಗಳು ಲಭಿಸಿವೆ.

ಈ ಪರೀಕ್ಷೆಯಲ್ಲಿ ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳ ಅರ್ಬನ್ ಕೋ-ಆಪರೇಟಿವ್ ಬ್ಯಾಂಕುಗಳ 13 ಜನ ಉದ್ಯೋಗಿಗಳು ಅತ್ಯಧಿಕ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದು, ಇದರಲ್ಲಿ ಮೊದಲ ಸ್ಥಾನವೂ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಗೆ ದೊರೆತಿದೆ.

ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಕೆ.ಆರ್. ವಿವೇಕ ಅವರು ಶೇ. 79.50 ಅಂಕಗಳನ್ನು ಗಳಿಸುವುದರ ಮೂಲಕ ಕರ್ನಾಟಕ ರಾಜ್ಯಕ್ಕೆ ಮೊದಲ ಸ್ಥಾನದ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗುವುದ ರೊಂದಿಗೆ ತಮ್ಮ ಬ್ಯಾಂಕಿಗೆ ಕೀರ್ತಿ ತಂದಿದ್ದಾರೆ.

ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಶ್ರೀಮತಿ ಎ.ಜೆ. ಹೇಮಂತಿನಿ ಅವರು ಶೇ. 76.33 ಅಂಕಗಳನ್ನು ಪಡೆದು, ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ 13 ಜನರಲ್ಲಿ 8ನೇ ಸ್ಥಾನ ಗಳಿಸಿದ್ದರೆ, ಸಿ. ಪ್ರದೀಪ್ ಕುಮಾರ್ (ಶೇ. 75.50) ಮತ್ತು ಟಿ.ಎಸ್. ರುದ್ರೇಶ್ (ಶೇ. 75.17) ಅವರುಗಳು ಕ್ರಮವಾಗಿ 12 ಮತ್ತು 13ನೇ ಸ್ಥಾನವನ್ನು ಪಡೆದುಕೊಂಡಿದ್ದಾರೆ.


ಕೆ.ಆರ್. ವಿವೇಕ್


ಶ್ರೀಮತಿ ಎ.ಜೆ. ಹೇಮಂತಿನಿ


ಸಿ. ಪ್ರದೀಪ್ ಕುಮಾರ್


ಟಿ.ಎಸ್. ರುದ್ರೇಶ್

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ (ಬೆಂಗಳೂರು) ವು ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ ಸಂಸ್ಥೆ ಮೂಲಕ ಡಿಪ್ಲೋಮಾ ಕೋರ್ಸ್ ನಡೆಸುತ್ತಿದ್ದು, 5ನೇ ಬ್ಯಾಚಿನಲ್ಲಿ 13 ಜನರು ಅತ್ಯುನ್ನತ ಶ್ರೇಣಿ ಪಡೆದಿದ್ದಾರೆ.

ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಉದ್ಯೋಗಿಗಳು ಮುಂಬಡ್ತಿ ಮತ್ತು ಇತರೆ ಸೌಲಭ್ಯಗಳನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಅವರ ಉದ್ಯೋಗಕ್ಕೆ ಉತ್ತೇಜಿಸುವ ಹಾಗೂ ಪ್ರೋತ್ಸಾಹಿಸುವ ದಿಸೆಯಲ್ಲಿ ಈ ಡಿಪ್ಲೋಮಾ ಕೋರ್ಸ್ ಸಹಕಾರಿಯಾಗುತ್ತದೆ.

**ಅಭಿನಂದನೆ :** ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್ ಪರೀಕ್ಷೆಯಲ್ಲಿ ಅತ್ಯಧಿಕ ಶ್ರೇಣಿಯಲ್ಲಿ ತೇರ್ಗಡೆಯಾಗುವುದರಲ್ಲಿ ನಾಲ್ಕು ಸ್ಥಾನಗಳು ತಮ್ಮ ಬ್ಯಾಂಕಿಗೆ ಲಭಿಸಿರುವ ಬಗ್ಗೆ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ ಸಂತಸ ವ್ಯಕ್ತಪಡಿಸಿದ್ದಾರೆ.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ತಮ್ಮ ಬ್ಯಾಂಕಿನ ನಾಲ್ವರನ್ನೂ ಅಭಿನಂದಿಸಿರುವ ಬಕ್ಕೇಶಪ್ಪ, ಇದರಿಂದ ತಮ್ಮ ಬ್ಯಾಂಕ್ ರಾಜ್ಯ ಮಟ್ಟದಲ್ಲಿ ಗುರುತಿಸಿಕೊಳ್ಳುವಂತಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಬ್ಯಾಂಕಿನ ಉಪಾಧ್ಯಕ್ಷ ಅಂದನೂರು ಮುಪ್ಪಣ್ಣ, ಹಿರಿಯ ನಿರ್ದೇಶಕರೂ ಆದ ಬ್ಯಾಂಕಿನ ವ್ಯವಸ್ಥಾಪನಾ ಮಂಡಳಿ ಅಧ್ಯಕ್ಷ ಟಿ.ಎಸ್. ಜಯರುದ್ರೇಶ್, ಹಿರಿಯ ನಿರ್ದೇಶಕರೂ ಆದ ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ಹಿರಿಯ ನಿರ್ದೇಶಕರೂ ಆದ ಜವಳಿ ಉದ್ಯಮಿ ಬಿ.ಸಿ. ಉಮಾಪತಿ ಅವರುಗಳು ಅತ್ಯುನ್ನತ ಶ್ರೇಣಿ ವಿಜೇತರನ್ನು ಅಭಿನಂದಿಸಿದ್ದಾರೆ.

ಮತ್ತಿಹಳ್ಳಿ ವೀರಣ್ಣ, ಪಲ್ಲಾಗಟ್ಟೆ ಶಿವಾನಂದಪ್ಪ, ಎಂ. ಚಂದ್ರಶೇಖರ್, ಅಜ್ಜಂಪುರ ಶೆಟ್ರು ವಿಜಯಕುಮಾರ್, ಶ್ರೀಮತಿ ಸುರೇಖಾ ಎಂ. ಚಿಗಟೇರಿ, ಕಂಚಿಕೇರಿ ಮಹೇಶ್, ನಲ್ಲೂರು ಎಸ್. ರಾಘವೇಂದ್ರ, ಇ.ಎಂ. ಮಂಜುನಾಥ, ವಿ. ವಿಕ್ರಮ್, ವೃತ್ತಿಪರ ನಿರ್ದೇಶಕರುಗಳಾದ ಮುಂಡಾಸ ವೀರೇಂದ್ರ, ಮಲ್ಲಿಕಾರ್ಜುನ ಕಣವಿ, ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳಾದ ಬೆಳಗಾವಿ ಬಸವರಾಜಪ್ಪ, ಜಂಬಗಿ ರಾಧೇಶ್, ಕೆ. ಕೊಟ್ರೇಶ್, ಪ್ರಧಾನ ವ್ಯವಸ್ಥಾಪಕ ಡಿ.ವಿ.ಆರಾಧ್ಯಮಠ ಅವರುಗಳು ಅತ್ಯುನ್ನತ ಶ್ರೇಣಿ ವಿಜೇತರನ್ನು ಅಭಿನಂದಿಸಿದ್ದಾರೆ.

# ಯುಪಿಎಸ್‌ಸಿ ಉತ್ತೀರ್ಣರು ತವರು ರಾಜ್ಯ ಕೇಳುವಂತಿಲ್ಲ : ಸುಪ್ರೀಂ

ನವದೆಹಲಿ, ಅ. 22 – ಯು.ಪಿ.ಎಸ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದವರು ತಮಗೆ ಇಂಥದೇ ಕೆಡರ್ ಅಥವಾ ತವರು ರಾಜ್ಯದ ನೇಮಕ ಬೇಕು ಎಂದು ಕೇಳುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.

ಐಎಎಸ್ ಪರೀಕ್ಷೆ ಎಂದೇ ಹೆಸರಾಗಿರುವ ಯು.ಪಿ.ಎಸ್.ಸಿ. ಪರೀಕ್ಷೆಯ ಆಯ್ಕೆ ಸಂದರ್ಭದಲ್ಲಿ ದೇಶದ ಯಾವುದೇ ಭಾಗದಲ್ಲಿ ಸೇವೆ ಸಲ್ಲಿಸುವುದಾಗಿ ಅಭ್ಯರ್ಥಿಗಳು ಒಪ್ಪಿಕೊಂಡಿರುತ್ತಾರೆ. ಆದರೆ, ನಂತರ ತವರು ರಾಜ್ಯಕ್ಕೆ ಹೆಣಗಾಡುತ್ತಾರೆ ಎಂದು ನ್ಯಾಯಾಲಯ ಹೇಳಿದೆ.

ಕೇರಳದ ಎ. ಶೈನಮೋಲ್ ಅವರನ್ನು ಹಿಮಾಚಲ ಪ್ರದೇಶಕ್ಕೆ ನಿಯೋಜಿಸಲಾಗಿತ್ತು. ಅವರನ್ನು ಕೇರಳಕ್ಕೆ ನೇಮಿಸುವಂತೆ ಕೇರಳ ಹೈಕೋರ್ಟ್ ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್ ಮೊರೆ ಹೋಗಿತ್ತು.

ಮೀಸಲು ವಿಭಾಗದ ಅಭ್ಯರ್ಥಿಗಳು ಯುಪಿಎಸ್‌ಸಿ ಪರೀಕ್ಷೆಯಲ್ಲಿ ಸಾಮಾನ್ಯ ವರ್ಗ ಆಯ್ಕೆ ಮಾಡಿಕೊಂಡರೆ, ನಂತರ ಮೀಸಲಾತಿಗೆ ಹೋಗಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಇದೇ ಸಂದರ್ಭದಲ್ಲಿ ಸ್ಪಷ್ಟಪಡಿಸಿದೆ.

ಪರಿಶಿಷ್ಟ ಜಾತಿ - ಪಂಗಡ ಇಲ್ಲವೇ ಒ.ಬಿ.ಸಿ. ಅಭ್ಯರ್ಥಿಗಳು ಸಾಮಾನ್ಯ ವರ್ಗದ ಅರ್ಹತೆಗೆ ಬಂದರೆ, ಅವರನ್ನು ಮೀಸಲು ರಹಿತ ಹುದ್ದೆಗಳಿಗೆ ನೇಮಿಸಬೇಕೆಂದು ಮಂಡಲ್ ಪ್ರಕರಣದಲ್ಲಿ ತೀರ್ಪು ನೀಡಲಾಗಿತ್ತು.

ಕೆಡರ್ ವಿತರಣೆ ಅಭ್ಯರ್ಥಿಗಳ ಹಕ್ಕಲ್ಲ. ಕೆಡರ್ ಅನ್ನು ಯಾಂತ್ರಿಕ ಪ್ರಕ್ರಿಯೆ ಮೂಲಕ ನಿರ್ಧರಿಸಲಾಗುತ್ತದೆ. ನಿಯಮಗಳಲ್ಲಿ ವ್ಯತ್ಯಾಸ ಮಾಡಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಶೈನಮೋಲ್ ಅವರು 2006ರ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರು. ಮುಸ್ಲಿಮ್ ಒಬಿಸಿ ವರ್ಗದವರಾಗಿದ್ದರೂ, 20ನೇ ರ್‍ಯಾಂಕ್ ಪಡೆದಿದ್ದ ಅವರು, ಸಾಮಾನ್ಯ ವರ್ಗಕ್ಕೆ ಸೇರ್ಪಡೆಯಾಗಿದ್ದರು.

# ಅಭಿವೃದ್ಧಿ ಕಾಮಗಾರಿಗೆ ಎಸ್ಸೆಸ್ ಚಾಲನೆ

ದಾವಣಗೆರೆ, ಅ.22- ಇಲ್ಲಿನ ಕೆ.ಆರ್. ರಸ್ತೆಯ ಮಾಜಿ ಪುರಸಭೆಯ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ 1 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಇಂದು ಚಾಲನೆ ನೀಡಿದರು.



ಕಾಲೇಜಿನಲ್ಲಿ ಹೆಚ್ಚುವರಿ ತರಗತಿ ಕೊಠಡಿಗಳು, ಪ್ರಯೋಗಾಲಯ ಕೊಠಡಿ, ಶೌಚಾಲಯ ಕೊಠಡಿ ಹಾಗೂ ಇತ್ಯಾದಿ ಅಭಿವೃದ್ಧಿ ಕಾಮಗಾರಿಯ ನಿರ್ಮಾಣಕ್ಕೆ ಎಸ್ಸೆಸ್ ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ನಗರ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್, ಸ್ಮಾರ್ಟ್‌ಸಿಟಿ ನಿರ್ದೇಶಕ ಎಂ. ನಾಗರಾಜ್, ನಿರ್ಮಿತಿ ಕೇಂದ್ರದ ಶಿವಕುಮಾರ್, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಎಸ್ ಡಿಎಂಸಿ ಉಪಾಧ್ಯಕ್ಷ ಎಂ.ಆರ್. ಸಿದ್ದಿಕ್, ಪ್ರಾಂಶುಪಾಲ ಆರ್. ಸುರೇಶ್, ಉಪ ಪ್ರಾಂಶುಪಾಲ ನಾಗರಾಜ್ ನಾಯ್ಕ, ಕೆ. ಜಯಪ್ಪ, ಆರ್.ಸಿ. ಬಾದಾಮಿ, ನಿಜಗುಣ ಮೂರ್ತಿ, ನೂರ್ ಅಹ್ಮದ್, ಶಾರದಾ, ಉಮಾದೇವಿ, ತಿಪ್ಪೇಸ್ವಾಮಿ, ವೀರೇಶ್ ಮತ್ತಿತರರು ಇದ್ದರು.

## ಮುದಹದಡಿ ಗ್ರಾ.ಪಂ. : ಆನಂದಪ್ಪ ಅಧ್ಯಕ್ಷ, ನೇತ್ರಾವತಿ ಉಪಾಧ್ಯಕ್ಷೆ





ದಾವಣಗೆರೆ, ಅ.22- ತಾಲ್ಲೂಕಿನ ಮುದಹದಡಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಮುದಹದಡಿ ಗ್ರಾಮದ ಆನಂದಪ್ಪ ಹಾಗೂ ಉಪಾಧ್ಯಕ್ಷರಾಗಿ ಶ್ರೀಮತಿ ನೇತ್ರಾವತಿ ಎಸ್. ಜರೀಕಟ್ಟೆ ಅವರು ಆಯ್ಕೆಯಾಗಿದ್ದಾರೆ ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಹೆಚ್.ವೈ. ಲಕ್ಷ್ಮಿ ದೇವಿ ತಿಳಿಸಿದ್ದಾರೆ.


ದ್ವಿತೀಯ ವರ್ಷದ ಪುಣ್ಯಸ್ಮರಣೆ



ಜನನ 12-05-1977

ಮರಣ 23-10-2019

ದಿ|| ಪ್ರೋ ಶೈಮನ್ ಕೆ.

ಸಂಸ್ಥಾಪಕ ಅಧ್ಯಕ್ಷರು, ರಾಘವೇಂದ್ರ ಸಮೂಹ ಸಂಸ್ಥೆಗಳು

" ನಮ್ಮ ಬದುಕಿಗೆ ಕ್ರೀಯಾಶೀಲತೆಯನ್ನು ತುಂಬಿ, ನಿಸರ್ಗದ ಮಡಿಲಲ್ಲಿ ನಮ್ಮೆಲ್ಲರನ್ನು ಬಿಟ್ಟು, ಸ್ವರ್ಗ ಸೇರಿದ ನಿಮ್ಮ ಆತ್ಮ ಮತ್ತೊಮ್ಮೆ ಭೂಮಿತಾಯಿಯ ಮೇಲೆ ಪ್ರತಿಬಿಂಬಿಸಲಿ "
ಸಾರ್ಥಕ ಬದುಕಿನ ಪಯಣದಲ್ಲಿ ನಿಮ್ಮ ಶ್ರಮ ಸಮುದ್ರದ ಅಲೆಗಳಂತೆ ಸದಾ ಹಸನ್ಮುಖಿಯಾಗಿ ರಾರಾಜಿಸಲಿ, ನಮ್ಮೆಲ್ಲರ ಬದುಕಿಗೆ ನಿಮ್ಮ ಆದರ್ಶ ಮತ್ತು ಆಶೀರ್ವಾದ ಶಾಶ್ವತವಾಗಿ ನಮ್ಮ ಮೇಲಿರಲಿ.

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷವಾಯಿತು.
ಸದಾ ನಿಮ್ಮ ಸ್ಮರಣೆಯಲ್ಲಿರುವ

ರಾಘವೇಂದ್ರ ಸಮೂಹ ಸಂಸ್ಥೆಗಳು, ಕುಟುಂಬವರ್ಗದವರು ಮತ್ತು ಸಿಬ್ಬಂದಿ ವರ್ಗದವರು ದಾವಣಗೆರೆ.



ಡಿಸ್ಕೌಂಟ್ ಧಮಾಕ

ನಮ್ಮೆಲ್ಲಾ ಗ್ರಾಹಕರಿಗೆ ದಸರಾ ಹಾಗೂ ದೀಪಾವಳಿ ಹಬ್ಬದ ಶುಭಾಶಯಗಳು ಹಾಗೂ ಹಬ್ಬದ ಪ್ರಯುಕ್ತ

ಭಾರೀ ರಿಯಾಯಿತಿ ದರದಲ್ಲಿ ಮಾರಾಟ

ದಿನಾಂಕ 14.10.2021 ರಿಂದ 24.10.2021 ರವರೆಗೆ ಮಾತ್ರ



ನಂದಿ ಇಂಟೀರಿಯರ್ಸ್ & ಡಿಸೈನರ್ಸ್

Exclusive Interior Designers For Your Fantasy

NANDI INTERIORS & DESIGNERS

# 596 JAGALUR ROAD, YELEBETHUR VILLAGE, DAVANGERE.

+91 96202 31800, /01/02/03/04, 08192 297288, web www.nandiinteriorsanddesigner.com



ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 22.10.2021ರಂದು ನಿಧನರಾದ

ಶ್ರೀ ಅಣಬೇರು ಮಾಳಿಗೇರ ಶೇಖರಪ್ಪ

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಗಂಗಾರಾಮ್ ಸಿಂಗ್ ಮತ್ತು ಮಕ್ಕಳು
ಹಾಗೂ ಕುಟುಂಬ ವರ್ಗ, ದಾವಣಗೆರೆ.
ಶ್ರಮಜೀವಿ ಮಿಶಿನ್‌ಟೆಕ್ ನೌಕರ ವರ್ಗ, ಆವರಗೆರೆ




DAVANAGERE URBAN CO-OPERATIVE BANK LTD. SINCE 1962

## ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಪ್ರಧಾನ ಕಚೇರಿ : ಅಂಚೆ ಪೆಟ್ಟಿಗೆ ಸಂಖ್ಯೆ 217, ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ದಾವಣಗೆರೆ - 577 002. ಫೋ. : 272540, 272541

ಕಾರ್ಯನಿರ್ವಾಹಕ ಮಂಡಲಿ ಸದಸ್ಯರು :



ಶ್ರೀ ಕೋಗುಂಡಿ ಬಕ್ಕೇಶಪ್ಪ – ಅಧ್ಯಕ್ಷರು
ಶ್ರೀ ಅಂದನೂರು ಮುಪ್ಪಣ್ಣ – ಉಪಾಧ್ಯಕ್ಷರು
ಶ್ರೀ ಬಿ.ಸಿ.ಉಮಾಪತಿ – ನಿರ್ದೇಶಕರು
ಶ್ರೀ ಮತ್ತಿಹಳ್ಳಿ ವೀರಣ್ಣ – ನಿರ್ದೇಶಕರು
ಶ್ರೀ ಪಲ್ಲಾಗಟ್ಟೆ ಶಿವಾನಂದಪ್ಪ – ನಿರ್ದೇಶಕರು
ಶ್ರೀ ಎಂ. ಚಂದ್ರಶೇಖರ್ – ನಿರ್ದೇಶಕರು
ಶ್ರೀ ಟಿ.ಎಸ್. ಜಯರುದ್ರೇಶ್ – ನಿರ್ದೇಶಕರು ಮತ್ತು ವ್ಯವಸ್ಥಾಪನಾ ಮಂಡಳಿ ಅಧ್ಯಕ್ಷರು
ಶ್ರೀ ದೇವರಮನಿ ಶಿವಕುಮಾರ್ – ನಿರ್ದೇಶಕರು ಮತ್ತು ವ್ಯವಸ್ಥಾಪನಾ ಮಂಡಳಿ ಸದಸ್ಯರು
ಶ್ರೀ ಅಜ್ಜಂಪುರ ಶೆಟ್ರು ವಿಜಯಕುಮಾರ್ – ನಿರ್ದೇಶಕರು
ಶ್ರೀಮತಿ ಸುರೇಖ ಎಂ. ಚಿಗಟೇರಿ – ನಿರ್ದೇಶಕರು
ಶ್ರೀ ಕಂಚಿಕೇರಿ ಮಹೇಶ್ – ನಿರ್ದೇಶಕರು ಮತ್ತು ವ್ಯವಸ್ಥಾಪನಾ ಮಂಡಳಿ ಸದಸ್ಯರು



ಶ್ರೀ ನಲ್ಲೂರು ಎಸ್. ರಾಘವೇಂದ್ರ – ನಿರ್ದೇಶಕರು
ಶ್ರೀ ಇ.ಎಂ. ಮಂಜುನಾಥ – ನಿರ್ದೇಶಕರು
ಶ್ರೀ ವಿ. ವಿಕ್ರಮ್ – ನಿರ್ದೇಶಕರು
ಶ್ರೀ ಮುಂಡಾಸ್ ವೀರೇಂದ್ರ – ಚಾರ್ಟರ್ಡ್ ಅಕೌಂಟೆಂಟ್, ವೃತ್ತಿಪರ ನಿರ್ದೇಶಕರು
ಶ್ರೀ ಕಣವಿ ಮಲ್ಲಿಕಾರ್ಜುನ್ – ವಕೀಲರು, ವೃತ್ತಿಪರ ನಿರ್ದೇಶಕರು
ಶ್ರೀ ಬೆಳ್ಳೂಡಿ ಮಂಜುನಾಥ್ – ವಿಶೇಷ ಆಹ್ವಾನಿತರು
ಶ್ರೀ ಎಂ. ದೊಡ್ಡಪ್ಪ – ವಿಶೇಷ ಆಹ್ವಾನಿತರು
ಶ್ರೀ ಬೆಳಗಾವಿ ಬಸವರಾಜಪ್ಪ – ಚಾರ್ಟರ್ಡ್ ಅಕೌಂಟೆಂಟ್, ವ್ಯವಸ್ಥಾಪನಾ ಮಂಡಳಿ ಸದಸ್ಯರು
ಶ್ರೀ ಜಂಬಗಿ ರಾಧೇಶ್ – ತೆರಿಗೆ ಸಲಹೆಗಾರರು, ವ್ಯವಸ್ಥಾಪನಾ ಮಂಡಳಿ ಸದಸ್ಯರು
ಶ್ರೀ ಕೆ. ಕೊಟ್ರೇಶ್ – ಸಾಫ್ಟ್‌ವೇರ್ ಇಂಜನಿಯರ್, ವ್ಯವಸ್ಥಾಪನಾ ಮಂಡಳಿ ಸದಸ್ಯರು
ಶ್ರೀ ಡಿ.ವಿ. ಆರಾಧ್ಯಮಠ್ – ಪ್ರಧಾನ ವ್ಯವಸ್ಥಾಪಕರು
ಶ್ರೀ ಬಿ.ಎಸ್. ಮಲ್ಲೇಶ್ – ಉಪ ಪ್ರಧಾನ ವ್ಯವಸ್ಥಾಪಕರು

ಬ್ಯಾಂಕಿನ ಷೇರುದಾರರ ಗಮನಕ್ಕೆ

ಮಾನ್ಯ ಸದಸ್ಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಕೋವಿಡ್-19 ಸಾಂಕ್ರಾಮಿಕ ರೋಗದ ಪ್ರಯುಕ್ತ ಸಹಕಾರ ಬ್ಯಾಂಕುಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ವಿಡಿಯೋ ಕಾನ್ಫರೆನ್ಸ್/ವರ್ಚ್ಯುವಲ್ ಮೀಟಿಂಗ್ ಮುಖಾಂತರ ಜರುಗಿಸುವಂತೆ ಸರ್ಕಾರವು ಮಾರ್ಗಸೂಚಿಯನ್ನು ನೀಡಿರುತ್ತದೆ. ಈ ಮಾರ್ಗಸೂಚಿಯನ್ವಯ ಬ್ಯಾಂಕಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ 23.10.2021ರ ಶನಿವಾರದಂದು ಬೆಳಿಗ್ಗೆ 11.30 ಗಂಟೆಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸಲು ತೀರ್ಮಾನಿಸಲಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ವಾರ್ಷಿಕ ಮಹಾಸಭೆಯ ವರ್ಚ್ಯುವಲ್ ಮೀಟಿಂಗ್‌ನಲ್ಲಿ ವಿಡಿಯೋ ಕಾನ್ಫರೆನ್ಸ್/ವೆಬ್‌ಕಾಸ್ಟ್ ಮೂಲಕ ಪಾಲ್ಗೊಳ್ಳುವುದು ಸಾಮಾನ್ಯ ಸಭೆಯ ಹಾಜರಾತಿಯೆಂದು ಪರಿಗಣಿಸಲ್ಪಡುವುದರಿಂದ ಮಾನ್ಯ ಸದಸ್ಯರು ತಮ್ಮ ಹಾಜರಾತಿಗಾಗಿ ಹಾಗೂ ವಾರ್ಷಿಕ ವರದಿಯನ್ನು ಡೌನ್‌ಲೋಡ್ ಮಾಡಿಕೊಳ್ಳಲು ಈ ಕೆಳಗೆ ಕೊಟ್ಟಿರುವ ಲಿಂಕನ್ನು ಬಳಸಿಕೊಳ್ಳಲು ಕೋರಿದೆ.

ಮಹಾಸಭೆಯ ಹಾಜರಾತಿಗಾಗಿ ಲಿಂಕ್ ಹಾಗೂ ಕ್ಯೂ.ಆರ್. ಕೋಡ್
https://seeall.live/ducb

ವಾರ್ಷಿಕ ವರದಿ ಡೌನ್‌ಲೋಡ್ ಮಾಡಿಕೊಳ್ಳಲು ಕ್ಯೂ.ಆರ್. ಕೋಡ್

ಕೋಗುಂಡಿ ಬಕ್ಕೇಶಪ್ಪ, ಅಧ್ಯಕ್ಷರು     ಅಂದನೂರು ಮುಪ್ಪಣ್ಣ, ಉಪಾಧ್ಯಕ್ಷರು     ಡಿ.ವಿ. ಆರಾಧ್ಯಮಠ್, ಪ್ರಧಾನ ವ್ಯವಸ್ಥಾಪಕರು


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte